info@buntsanghablr.com
buntsanghabangaloare@yahoo.in

# ಸ್ನೇಹ ಚಿಂತನೆ

ಮಾಸ ಪತ್ರಿಕೆ

ಫೆಬ್ರವರಿ 2026
ಸಂಪುಟ 22 ಸಂಚಿಕೆ 02

ಸಂಚಿಕೆ ಬೆಲೆ ರೂ. 1/–



ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದ 26ನೇ ವಾರ್ಷಿಕೋತ್ಸವ



ಯಕ್ಷಗಾನ ಮತ್ತು ರಂಗತರಬೇತಿ ಸಮಿತಿ–ಸುಕನ್ಯಾ ಕಲ್ಯಾಣ ಯಕ್ಷಗಾನ






ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆ




ವೈದ್ಯಕೀಯ ಮತ್ತು ವಿಮಾ ವಿಭಾಗ – ಉಚಿತ ತಜ್ಞ ವೈದ್ಯಕೀಯ ಶಿಬಿರ

ಬಂಟರ ಸಂಘ ಬೆಂಗಳೂರು
BUNTS' SANGHA BANGALORE
# 324, Bunts' Sangha Complex, Chord Road,
Vijayanagar, Bengaluru - 560040.
P : 080-23399323 / 23399636 | E : info@buntsanghablr.com

DURGAPARAMESHWARI CHITS

# DURGAPARAMESHWARI CHITS PVT. LTD.

(Govt of Karnataka Approved Chit Company)

Regd. Office: No. 228/B 2nd Floor, 55th Cross, 3rd Block, Rajajinagar, (Near Ramamandira), Bengaluru, - 560010

Email : info@durgaparameshwarichits.in

**MB UMESH SHETTY**
Managing Director
**Mobile : 9845025921 | Website: durgaparameshwarichits.in**

WEBSITE



LOCATION

Chit Fund is the oldest indigenous financial Institution in India. The term CHIT FUND is known as chit, Chittie or Kuri in different parts of the country. But its operation is same throughout the country. Chit fund is a convenient financial instrument which serves twin purposes of savings and Borrowings by a subscriber. The financial institution, ensuring safest investment, subjecting itself to the control of central and state statutes, which empowers the common man is none other than **DURGAPARAMESHWARI CHITS PVT. LTD.**

## OUR POPULAR CHITS DESIGNED ACCORDING TO YOUR NEED AND CONVENIENCE

| SL.NO. | Monthly Instalment | Period | Chit Amount |
|---|---|---|---|
| 1 | 10,000 | 30 | 3,00,000 |
| 2 | 20000 | 25 | 5,00,000 |
| 3 | 25000 | 40 | 10,00,000 |
| 4 | 50,000 | 30 | 15,00,000 |
| 5 | 50,000 | 40 | 20,00,000 |
| 6 | 70,000 | 30 | 21,00,000 |

| SL.NO. | Monthly Instalment | Period | Chit Amount |
|---|---|---|---|
| 7 | 75,000 | 40 | 30,00,000 |
| 8 | 1,00,000 | 40 | 40,00,000 |
| 9 | 1,25,000 | 40 | 50,00,000 |
| 10 | 2,00,000 | 25 | 50,00,000 |
| 11 | 2,50,000 | 40 | 1,00,00,000 |
| 12 | 5,00,000 | 40 | 2,00,00,000 |

## The Best Reliable Financial Investment Option

**Call : 080-35831843 | 9535544772 | 9845025921 | 9513005556 | 9513005557**



SCAN FOR PAYMENT



ADVT.

ಬಂಟರ ಸಂಘ ಬೆಂಗಳೂರು

# ಸ್ನೇಹ ಚಿಂತನೆ

VOL - 22
FEBRUARY - 2026
ISSUE - 02

Monthly Magazine Published by
**BUNTS' SANGHA BANGALORE**



**ಸಾಹಿತ್ಯ ಪ್ರಕಾಶನ ಸಮಿತಿ**

ಚೇರ್‌ಪರ್ಸನ್ ಮತ್ತು ಗೌರವ ಸಂಪಾದಕರು:
ಶ್ರೀ ರವೀಂದ್ರ ಶೆಟ್ಟಿ ಹಟ್ಟಿಯಂಗಡಿ

**ಸಹ ಸಂಪಾದಕರು:**
ಶ್ರೀ ದೀಪಕ್ ಜೆ. ಶೆಟ್ಟಿ

**ಗೌರವ ಸಲಹೆಗಾರರು:**
ಶ್ರೀ ಎಂ. ಮುರಲೀಧರ ಹೆಗ್ಡೆ
ಶ್ರೀ ಬಾಲಕೃಷ್ಣ ಶೆಟ್ಟಿ (ಎಬಿ ಶೆಟ್ಟಿ)
ಡಾ. ದೀಪಕ್ ಶೆಟ್ಟಿ

**ಸಂಪಾದಕೀಯ ಮಂಡಳಿ**
ಶ್ರೀಮತಿ ನಿರ್ಮಲ ಸಿ. ರೈ
ಶ್ರೀ ಪ್ರಸಾದ್ ಶೆಟ್ಟಿ ಸೀತಾನದಿ
ಶ್ರೀಮತಿ ಸ್ಮಿತಾ ಬಲ್ಲಾಳ್
ಶ್ರೀ ಸತೀಶ್ ಶೆಟ್ಟಿ ವಕ್ವಾಡಿ
ಶ್ರೀ ಸಂದೀಪ್ ಹೆಗ್ಗದ್ದೆ
ಶ್ರೀಮತಿ ಶ್ಯಾಮಲ ಶೆಟ್ಟಿ

**ಪತ್ರಿಕಾ ಸಲಹಾ ವಿಭಾಗ:**
ಸಮಾಜ ಸೇವೆ ವಿಭಾಗ: ಶ್ರೀ ಜಯರಾಮ ಶೆಟ್ಟಿ ನೂಜಾಡಿ
ಕಾನೂನು ಸಲಹೆಗಾರರು: ಶ್ರೀಮತಿ ಸುಪ್ರೀತಾ ಕೆ. ಶೆಟ್ಟಿ
ಆರೋಗ್ಯ ಮಾಹಿತಿ ವಿಭಾಗ: ಡಾ. ಶಾಲ್ಮಲೀ ಸುರೇಶ್
ಮನೋರಂಜನಾ ವಿಭಾಗ: ಶ್ರೀಮತಿ ರೇವತಿ ಶೆಟ್ಟಿ
ಶೈಕ್ಷಣಿಕ ವಿಭಾಗ: ಶ್ರೀಮತಿ ನಂದಿನಿ ನಾಗರಾಜ್ ಶೆಟ್ಟಿ
ಕ್ರೀಡಾ ವಿಭಾಗ: ಶ್ರೀ ನವೀನ್ ಶೆಟ್ಟಿ

**ಪೋಷಕ ಸದಸ್ಯರು:**
ಶ್ರೀಮತಿ ಮನೋರಮ ಚೌಟ
ಶ್ರೀಮತಿ ವೇದ ಎಸ್. ಶೆಟ್ಟಿ
ಶ್ರೀ ಬಿ. ಕುಸುಮಾಕರ ಶೆಟ್ಟಿ
ಶ್ರೀ ಆರ್.ಎಸ್. ಶೆಟ್ಟಿ
ಶ್ರೀಮತಿ ವಸಂತಿ ಪಿ. ಶೆಟ್ಟಿ
ಶ್ರೀ ಪ್ರಕಾಶ್ ಶೆಟ್ಟಿ
ಶ್ರೀ ಎ. ಜೆ. ಶೆಟ್ಟಿ
ಶ್ರೀಮತಿ ಗೀತ ಭಗವಾನ್‌ದಾಸ್ ರೈ
ಶ್ರೀ ಶ್ರೀನಿವಾಸ ಸೂಡ

**ಪ್ರಕಾಶಕರು:**
ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿ


## ಒಳ ಪುಟಗಳಲ್ಲಿ.....


| | ಪುಟ |
|---|---|
| ಸಂಪಾದಕೀಯ | 2 |
| ಅಧ್ಯಕ್ಷರ ಮಾತು | 3 |
| ಗೌರವ ಕಾರ್ಯದರ್ಶಿಯವರ ವರದಿ | 4 |
| ಬಂಟರ ಸಂಘ ಬೆಂಗಳೂರು – ಯಕ್ಷಗಾನ ಹಾಗೂ ರಂಗತರಬೇತಿ ಸಮಿತಿ, ಯಕ್ಷಗಾನ ಕಾರ್ಯಕ್ರಮ | 5 |
| Bunts Sangha RNS Vidyanikeyan - I Graduation Day Report-2026 | 6 |
| ಬಂಟರ ಸಂಘ ಆರ್.ಎನ್.ಎಸ್. ಪಿಯು ಕಾಲೇಜು ಯಲಚಗುಪ್ಪೆ, ಗ್ರಾಜ್ಯುಯೇಷನ್ ಡೇ ವರದಿ | 7 |
| ಬಂಟರ ಸಂಘ ಬೆಂಗಳೂರು ಸಮಾಜ ಸೇವಾ ಸಮಿತಿ–2024–26 | 8 |
| ಬಂಟರ ಸಂಘ ಬೆಂಗಳೂರು, ಕ್ರೀಡಾ ಸಮಿತಿ – 2024–26 | 9 |
| ಅಭಿವೃದ್ಧಿಯಲ್ಲಿ ಜಪಾನ್ ದೇಶದ ನಾಗಾಲೋಟ | 11 |
| ಬಂಟರ ಸಂಘ ಬೆಂಗಳೂರು–ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ 2024–26 | 13 |
| ಬಂಟರ ಸಂಘ ಬೆಂಗಳೂರು – ವೈದ್ಯಕೀಯ ಮತ್ತು ವಿಮಾ ಸಮಿತಿ – 2024–26, ಉಚಿತ ತಜ್ಞ ವೈದ್ಯಕೀಯ ಶಿಬಿರ | 14 |
| ಬಂಟರ ಸಂಘ ಬೆಂಗಳೂರು ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಸಾಂಸ್ಕೃತಿಕ ಮತ್ತು ಕ್ರೀಡಾ ದಿನಾಚರಣೆಯ ವರದಿ | 25 |
| ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ – II ಸುಗ್ಗಿ ಹಬ್ಬ | 28 |
| ಬಂಟರ ಸಂಘ ಬೆಂಗಳೂರು ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ 26ನೇ ವಾರ್ಷಿಕೋತ್ಸವ ಸಮಾರಂಭ | 29 |


**ಮುಖ ಪುಟ**

ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದ 26ನೇ ವಾರ್ಷಿಕೋತ್ಸವ
ಯಕ್ಷಗಾನ ಮತ್ತು ರಂಗತರಬೇತಿ ಸಮಿತಿ–ಸುಕನ್ಯಾ ಕಲ್ಯಾಣ ಯಕ್ಷಗಾನ
ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆ
ವೈದ್ಯಕೀಯ ಮತ್ತು ವಿಮಾ ವಿಭಾಗ – ಉಚಿತ ತಜ್ಞ ವೈದ್ಯಕೀಯ ಶಿಬಿರ


ಈ ಸಂಚಿಕೆಯಲ್ಲಿ ಪ್ರಕಟವಾದ ಜಾಹೀರಾತು ಮತ್ತು ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಚಂದಾದಾರರು ಮತ್ತು ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ – ಸಂಪಾದಕ ಮಂಡಳಿ

# ಸಂಪಾದಕೀಯ



## ಪರೀಕ್ಷೆಯ ಸಂದರ್ಭದಲ್ಲಿ ನಮ್ಮ ಬಂಟ ವಿದ್ಯಾರ್ಥಿಗಳ ಮನೋಭಾವ

ಶಿಕ್ಷಣವೆಂಬುವುದು ಕೇವಲ ಉದ್ಯೋಗದ ದಾರಿ ಮಾತ್ರವಲ್ಲ, ಅದು ವ್ಯಕ್ತಿತ್ವ ನಿರ್ಮಾಣದ ಪಥ. ನಮ್ಮ ಬಂಟ ಸಮುದಾಯವು ಶತಮಾನಗಳಿಂದ ಶಿಸ್ತು, ಶ್ರಮ, ನಿಷ್ಠೆ ಮತ್ತು ಸಾಧನೆಯ ಪರಂಪರೆಯನ್ನು ಉಳಿಸಿಕೊಂಡು ಬಂದಿದೆ. ಇದೇ ಮೌಲ್ಯಗಳು ನಮ್ಮ ವಿದ್ಯಾರ್ಥಿಗಳಲ್ಲಿ ಪ್ರತಿಫಲಿಸಬೇಕು–ವಿಶೇಷವಾಗಿ ಪರೀಕ್ಷೆಯಂತಹ ಮಹತ್ವದ ಸಂದರ್ಭಗಳಲ್ಲಿ.

ಪರೀಕ್ಷೆ ಎಂದರೆ ಅಂಜುವ ವಿಷಯವಲ್ಲ; ಅದು ನಮ್ಮ ಪರಿಶ್ರಮದ ಪ್ರತಿಬಿಂಬ. ವಿದ್ಯಾರ್ಥಿಗಳು ಈ ಅವಧಿಯಲ್ಲಿ ಮೊದಲಿಗೆ ಸಮಯಪಾಲನೆ ಮತ್ತು ಯೋಜಿತ ಓದು ಎಂಬ ಎರಡು ಅಸ್ತ್ರಗಳನ್ನು ಹಿಡಿಯಬೇಕು. ನಿಯಮಿತ ವೇಳಾಪಟ್ಟಿ, ಪುನರವಲೋಕನ ಮತ್ತು ಮಾದರಿ ಪ್ರಶ್ನೆ ಪತ್ರಿಕೆಗಳ ಅಭ್ಯಾಸವು ಆತ್ಮ ವಿಶ್ವಾಸವನ್ನು ಹೆಚ್ಚಿಸುತ್ತದೆ. ಕೊನೆಯ ಕ್ಷಣದ ಆತಂಕಕ್ಕಿಂತ ಪೂರ್ವತಯಾರಿ ಶ್ರೇಷ್ಠ.

ಇದೇ ಸಂದರ್ಭದಲ್ಲಿ ಆರೋಗ್ಯದ ಕಾಳಜಿ ಅತ್ಯಂತ ಮುಖ್ಯ. ಸಮರ್ಪಕ ನಿದ್ರೆ, ಸರಿಯಾದ ಆಹಾರ ಮತ್ತು ಸ್ವಲ್ಪ ವಿಶ್ರಾಂತಿ–ಇವು ಮನಸ್ಸಿನ ಏಕಾಗ್ರತೆಯನ್ನು ಕಾಪಾಡುತ್ತದೆ. ದೇಹ ಆರೋಗ್ಯವಾಗಿದ್ದರೆ ಮನಸ್ಸು ಸ್ಥಿರವಾಗಿರುತ್ತದೆ; ಮನಸ್ಸು ಸ್ಥಿರವಾಗಿದ್ದರೆ ಉತ್ತರಪತ್ರಿಕೆ ಸ್ಪಷ್ಟವಾಗಿರುತ್ತದೆ.

ನಮ್ಮ ಬಂಟ ವಿದ್ಯಾರ್ಥಿಗಳು ಮತ್ತೊಂದು ವಿಷಯವನ್ನು ಮನದಟ್ಟು ಮಾಡಿಕೊಳ್ಳಬೇಕು–ಪರೀಕ್ಷೆ ಜೀವನದ ಅಂತಿಮ ತೀರ್ಪಲ್ಲ. ಫಲಿತಾಂಶ ಒಂದು ಅಂಕಿಯಷ್ಟೇ; ಆದರೆ ವ್ಯಕ್ತಿತ್ವದ ಮೌಲ್ಯ ಅಂಕಿಗಳಿಗಿಂತ ದೊಡ್ಡದು. ವಿಫಲತೆ ಬಂದರೂ ಅದು ಅನುಭವದ ಪಾಠ. ಯಶಸ್ಸು ಬಂದರೆ ಅದು ಇನ್ನಷ್ಟು ಹೊಣೆಗಾರಿಕೆಯನ್ನು ನೀಡುತ್ತದೆ.

ಪೋಷಕರು ಮತ್ತು ಗುರುಗಳ ಪ್ರೋತ್ಸಾಹ, ವಿದ್ಯಾರ್ಥಿಯ ಬಲ ಮತ್ತು ದೇವರ ಆಶೀರ್ವಾದದೊಂದಿಗೆ ವಿದ್ಯಾರ್ಥಿಗಳು ಧೈರ್ಯದಿಂದ ಪರೀಕ್ಷೆಗೆ ಹೆಜ್ಜೆ ಹಾಕಬೇಕು. ನಮ್ಮ ಸಮುದಾಯದ ಇತಿಹಾಸವೇ ಸಾಕ್ಷಿ–ಪರಿಶ್ರಮಿಸಿದರೆ ಸಾಧನೆ ನಮ್ಮ ಹಿಂದೆ ಬರುತ್ತದೆ.

ಕೃತಕ ಬುದ್ಧಿಮತ್ತೆಯ ಯುಗದಲ್ಲಿ ವಿದ್ಯಾರ್ಥಿಗಳು ಎಐಯನ್ನು ಅವಲಂಬನೆಯಾಗಿ ಅಲ್ಲ, ಮಾರ್ಗದರ್ಶಕ ಸಾಧನವಾಗಿ ನೋಡಬೇಕು. ತಮ್ಮ ಸ್ವಂತ ಪರಿಶ್ರಮ, ಆಲೋಚನಾ ಸಾಮರ್ಥ್ಯ ಮತ್ತು ಶಿಸ್ತುಬದ್ಧ ಅಭ್ಯಾಸವೇ ಪರೀಕ್ಷಾ ಯಶಸ್ಸಿನ ನಿಜವಾದ ಕೀಲಿ".

ಎಐ ವಿದ್ಯಾರ್ಥಿಗಳಿಗೆ ವೇಗ ಮತ್ತು ಸ್ಪಷ್ಟತೆ ನೀಡಬಹುದು, ಆದರೆ ಸಾಧನೆಯ ಶಿಖರಕ್ಕೆ ಏರಿಸುವುದು ಅವರ ಆತ್ಮಾವಿಶ್ವಾಸ ಮತ್ತು ನಿರಂತರ ಪ್ರಯತ್ನವೇ. ತಂತ್ರಜ್ಞಾನವನ್ನು ಜಾಣ್ಮೆಯಿಂದ ಬಳಸಿದಾಗ ಮಾತ್ರ ಅದು ಸಾಧನೆಗೆ ಸೇತುವೆಯಾಗುತ್ತದೆ.

ಭವಿಷ್ಯ ಎಐಯೊಂದಿಗೆ ಸಾಗುತ್ತದೆ ಎಂಬುದು ನಿಜ, ಆದರೆ ಮೌಲ್ಯಗಳೊಂದಿಗೆ ಸಾಗುವ ವಿದ್ಯಾರ್ಥಿಯೇ ನಿಜವಾದ ವಿಜೇತ. ಜ್ಞಾನವನ್ನು ಗಳಿಸಲು ಎಐ ನೆರವಾಗಬಹುದು, ಆದರೆ ವ್ಯಕ್ತಿತ್ವವನ್ನು ಕಟ್ಟುವುದು ವಿದ್ಯಾರ್ಥಿಯ ಸ್ವಂತ ಶ್ರಮವೇ.

ಬೆಂಗಳೂರು ಬಂಟರ ಸಂಘದ ಪರವಾಗಿ ನಮ್ಮ ಎಲ್ಲಾ ವಿದ್ಯಾರ್ಥಿಗಳಿಗೆ ಹಾರ್ದಿಕ ಶುಭಾಶಯಗಳು. ನೀವು ಸಾಧಿಸುವ ಪ್ರತಿಯೊಂದು ಯಶಸ್ಸು ನಿಮ್ಮ ಕುಟುಂಬಕ್ಕೂ, ಸಮಾಜಕ್ಕೂ ಮತ್ತು ನಮ್ಮ ಸಂಘಕ್ಕೂ ಹೆಮ್ಮೆಯ ವಿಷಯವಾಗಲಿ.

ಶ್ರಮವೇ ಶ್ರೇಷ್ಠ ಮಾರ್ಗ–ಆತ್ಮ ವಿಶ್ವಾಸವೇ ಯಶಸ್ಸಿನ ಕೀಲಿ.

ವಿದ್ಯಾರ್ಥಿಗಳ ಭವಿಷ್ಯ ಉಜ್ವಲವಾಗಲಿ ಎಂಬ ಆಶಯದೊಂದಿಗೆ,

**ರವೀಂದ್ರ ಶೆಟ್ಟಿ ಹಟ್ಟಿಯಂಗಡಿ**
**ಸಂಪಾದಕರು**

# ಅಧ್ಯಕ್ಷರ ಮಾತು



**ಪ್ರೀತಿಯ ಬಂಟ ಬಾಂಧವರೇ,**

**ಸರ್ವೇ ಸಾಗರ ಸಮಾನಾ: ಸ್ಮಿತಂ ಹೃದಯಸಮಾ: ।**
**ದೀನಬಲವರತಾ: ಶ್ರೇಷ್ಠಾ: ಸುಸಂಸ್ಕೃತ್ಯಮಾವಹಂತಿ ॥**

ಎಲ್ಲರೂ ಸಮುದ್ರದಂತೆ ವಿಶಾಲ ಹೃದಯದವರಾಗಿರಲಿ, ನಗುವಿನಿಂದ ಹೃದಯವನ್ನು ತಿಳಿಗೊಳಿಸಲಿ.

ದೀನತೆ, ಶ್ರದ್ಧೆ, ಶಕ್ತಿ ಮತ್ತು ಧೈರ್ಯ ಹೊಂದಿದವರು ನಿಜವಾದ ಸಂಸ್ಕಾರವಂತರು, ಇತರರಿಗೂ ಸದ್ಗುಣಗಳನ್ನು ಹರಡುವರು.

ಬಂಟರ ಸಂಘ ಆರ್. ಎನ್.ಎಸ್. ವಿದ್ಯಾನಿಕೇತನ– II ಶಾಲೆಯಲ್ಲಿ **'ಸುಗ್ಗಿ ಹಬ್ಬ–ಸಂಕ್ರಾಂತಿ ಉತ್ಸವ'**ವನ್ನು ಮಕರ ಸಂಕ್ರಾಂತಿ ಹಬ್ಬದ ಅಂಗವಾಗಿ ಶಾಲೆಯ ಸುತ್ತಮುತ್ತಲಿನ ಹಳ್ಳಿಯ ಪೋಷಕರೇ ಯೋಜನೆ ಮಾಡಿ ಹಳ್ಳಿಯ ಸೊಗಡನ್ನು ಬಿಂಬಿಸಿ, ಸಾಂಪ್ರದಾಯಿಕವಾಗಿ ಆಚರಿಸಿದ್ದು ವಿಶೇಷ ಮೆರುಗನ್ನು ನೀಡಿತು.

ಸ್ಥಾಪಕರ ದಿನವಾಗಿ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆಯನ್ನು ಜನವರಿ 26 ಗಣರಾಜ್ಯೋತ್ಸವ ದಿನದಂದು ಆಚರಿಸಲಾಯಿತು. ಮಕ್ಕಳ ಪ್ರತಿಭೆಗೆ, ಯುವ ಪೀಳಿಗೆಗೆ ಮತ್ತು ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಕ್ರೀಡಾತ್ಮಕ ಬೆಳವಣಿಗೆಗೆ ಉತ್ತೇಜನ ನೀಡಲು ಈ ವೇದಿಕೆಯು ಪೂರಕವಾಯಿತು. ಸಂಘದ ವೈದ್ಯಕೀಯ ವಿಭಾಗದ ವತಿಯಿಂದ ಆಯೋಜಿಸಿದ ಉಚಿತ ತಜ್ಞ ವೈದ್ಯಕೀಯ ಹಾಗೂ ರಕ್ತದಾನ ಶಿಬಿರ ಕಾರ್ಯಕ್ರಮವು ಬಹಳ ಯಶಸ್ವಿಯಾಗಿ ಜರುಗಿತು.

ಬೆಂಗಳೂರು ಬಂಟರ ಸಂಘವು ನಮ್ಮ ಪರಂಪರೆಯ, ಒಕ್ಕೂಟದ ಮತ್ತು ಶಿಕ್ಷಣದ ಮೇಲೆ ಎಂದಿಗೂ ಗಟ್ಟಿಯಾಗಿ ನಿಂತಿರುವ ಒಂದು ಸಂಸ್ಥೆ. ನಮ್ಮ ಸಂಘವು ಶಾಂತಿ, ಸಹಕಾರ ಮತ್ತು ಒಗ್ಗಟ್ಟಿನ ಮೂಲಕ ಸಮಾಜಕ್ಕೆ ಸೇವೆ ಸಲ್ಲಿಸುತ್ತಿದ್ದು, 2025–26ನೇ ಶೈಕ್ಷಣಿಕ ಸಾಲಿನಲ್ಲಿ, ಬಂಟರ ಸಂಘ ಆರ್. ಎನ್.ಎಸ್. ವಿದ್ಯಾನಿಕೇತನ ಶಾಲೆ ಮತ್ತು ಕಾಲೇಜಿನಲ್ಲಿ ವಿದ್ಯಾರ್ಥಿಗಳು ವಿವಿಧ ಕ್ಷೇತ್ರಗಳಲ್ಲಿ ಶ್ರೇಷ್ಠ ಪ್ರದರ್ಶನ, ಉತ್ತಮ ಫಲಿತಾಂಶ ಮತ್ತು ಸಾಧನೆಗಳನ್ನು ತೋರಿದ್ದಾರೆ. ಶಿಕ್ಷಕರ ಪರಿಶ್ರಮ ಮತ್ತು ಪೋಷಕರ ಬೆಂಬಲವೇ ಈ ಸಾಧನೆಗೆ ಪ್ರೇರಣೆ. ಈ ವರ್ಷ ಬಂಟರ ಸಂಘ ಆರ್. ಎನ್.ಎಸ್. ವಿದ್ಯಾನಿಕೇತನ ಎರಡೂ ಶಾಲೆಯಲ್ಲಿ CET / KCET / JEE full-fledged integrated course ಅನ್ನು ಪ್ರಾರಂಭಿಸುವ ಯೋಜನೆಯನ್ನು ಹಮ್ಮಿಕೊಂಡಿದ್ದೇವೆ.

ಸಂಘದ ದಾಖಲೆಗಳಿಗಾಗಿ ಮತ್ತು ಸದಸ್ಯತ್ವದ ಕ್ರಮಬದ್ಧ ನಿರ್ವಹಣೆಗಾಗಿ ಸದಸ್ಯರೆಲ್ಲರೂ ತಮ್ಮ ಆಧಾರ್ ಕಾರ್ಡ್‌ನ ಪ್ರತಿ ಮತ್ತು ಇನ್ನಿತರ ದಾಖಲೆಯನ್ನು ಸಂಘದ ಇ–ಮೈಲ್ ಐಡಿ buntsanghabangalore@yahoo.in / 7022119739 ದೂರವಾಣಿ ಸಂಖ್ಯೆಗೆ ವಾಟ್ಸಾಪ್ ಮೂಲಕ ಅಥವಾ ನೇರವಾಗಿ ಸಂಘದ ಕಛೇರಿಗೆ ನೀಡಬೇಕೆಂದು ವಿನಂತಿಸಿಕೊಳ್ಳುತ್ತಿದ್ದೇನೆ.

ನಾವು ವಿದ್ಯೆ, ದಕ್ಷತೆ ಮತ್ತು ಮೌಲ್ಯಗಳ ಅಭಿವೃದ್ಧಿಯ ಮೇಲೆ ಗಮನ ಹರಿಸಬೇಕು. ತಿಳುವಳಿಕೆ, ಪರಿಸರ ಜಾಗೃತಿ ಮತ್ತು ಮಾನವೀಯ ಮೌಲ್ಯಗಳನ್ನು ಪ್ರೋತ್ಸಾಹಿಸುವ ಶಾಲಾ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳು ಮುಂದುವರಿದು ಎಲ್ಲಾ ವಿದ್ಯಾರ್ಥಿಗಳಿಗೆ ಸಾಹಿತ್ಯ, ಕ್ರೀಡೆ, ಕಲಾ ಮತ್ತು ವಿಜ್ಞಾನ ಕ್ಷೇತ್ರದಲ್ಲಿ ಹೆಚ್ಚಿನ ಅವಕಾಶಗಳು ಸಿಗಲಿ ಎಂದು ಹಾರೈಸುತ್ತೇನೆ.

**ಇಂತಿ ತಮ್ಮ ಪ್ರೀತಿಯ**
**ಸಿಎ. ಅಶೋಕ್ ಶೆಟ್ಟಿ ಎಂ**
**ಅಧ್ಯಕ್ಷರು**

# ಗೌರವ ಕಾರ್ಯದರ್ಶಿಯವರ ವರದಿ



**ಮಾನ್ಯ ಸದಸ್ಯರೇ,**

ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ –I ರ ಗ್ರಾಜ್ಯುಯೇಷನ್ ದಿನವನ್ನು ದಿನಾಂಕ 09.01.2026ರಂದು ಸಂಘದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀಮತಿ ರಮ್ಯಾ ಸುರೇಶ್‌ರವರು ಭಾಗವಹಿಸಿದ್ದರು.

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ II ರ ಶಾಲಾ ಆವರಣದಲ್ಲಿ ದಿನಾಂಕ 13.01.2026ರಂದು ಸುಗ್ಗಿ ಹಬ್ಬ–ಸಂಕ್ರಾತಿ ಹಬ್ಬವನ್ನು ಬಹಳ ವೈಶಿಷ್ಟ್ಯಪೂರ್ಣವಾಗಿ ಆಚರಿಸಲಾಯಿತು. ಈ ಕಾರ್ಯಕ್ರಮಕ್ಕೆ 'ಜನಪದ ಗಂಗ' ಎಂದೇ ಗುರುತಿಸಿಕೊಂಡಿರುವ ಬಿ.ಸಿ. ಗಂಗಣ್ಣನವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದ 26ನೇ ವಾರ್ಷಿಕೋತ್ಸವವನ್ನು ದಿನಾಂಕ 19.01.2026ರಂದು ಅತ್ಯಂತ ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು. ಸಭಾಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸಂಘದ ಹಿರಿಯ ಸದಸ್ಯರು ಮತ್ತು ದಾನಿಗಳಾದ ಇರ್ಮಾಡಿ ಶ್ರೀ ಜಯಪ್ರಸಾದ್ ಶೆಟ್ಟಿಯವರು ಮತ್ತು ಶ್ರೀ ಲಕ್ಷ್ಮೀನಾರಾಯಣ ಶರ್ಮಾರವರು ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಆಯೋಜಿಸಿದ ಪ್ರಾರ್ಥನಾ ಮಂದಿರ ಸಮಿತಿಯ ಚೇರ್‌ಪರ್ಸನ್ ಶ್ರೀಮತಿ ಶೋಭಾ ಶೇಖ, ಸಂಚಾಲಕರಾದ ಶ್ರೀ ಪ್ರಸಾದ್ ಕುಮಾರ್ ಶೆಟ್ಟಿ ಮತ್ತು ಅವರ ತಂಡಕ್ಕೆ ಅಭಿನಂದನೆಗಳು. ಇದೇ ದಿನ ಮಧ್ಯಾಹ್ನ "ಸುಕನ್ಯಾ ಕಲ್ಯಾಣ" ಯಕ್ಷಗಾನವನ್ನು ಯಶಸ್ವಿಯಾಗಿ ಆಯೋಜಿಸಿದ ಯಕ್ಷಗಾನ ಮತ್ತು ರಂಗತರಬೇತಿ ಸಮಿತಿಯ ಚೇರ್‌ಪರ್ಸನ್ ಮೂಡುಬಗೆ ಶ್ರೀ ಸಂತೋಷ್ ಕುಮಾರ್ ಶೆಟ್ಟಿ, ಸಂಚಾಲಕರಾದ ಶ್ರೀ ಚರಣ್‌ರಾಜ್ ಶೆಟ್ಟಿ ಮತ್ತು ಅವರ ತಂಡಕ್ಕೆ ಧನ್ಯವಾದಗಳು. ಕಾರ್ಯಕ್ರಮಕ್ಕೆ ಸಹಕರಿಸಿದ ಎಲ್ಲಾ ದಾನಿಗಳಿಗೂ ಧನ್ಯವಾದಗಳು.

ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆಯನ್ನು ದಿನಾಂಕ 26.01.2026ರಂದು ಸಂಘದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನದಲ್ಲಿ ಆಯೋಜಿಸಲಾಗಿತ್ತು. ಸ್ಥಾಪಕರ ದಿನಾಚರಣೆಯನ್ನು ಸಾರ್ಥಕ್ಯಗೊಳಿಸುವ ನಿಟ್ಟಿನಲ್ಲಿ ಆಯೋಜಿಸಲಾದ ವಿವಿಧ ಕಾರ್ಯಕ್ರಮಗಳಲ್ಲಿ ಮೊದಲನೆಯದು ಉಚಿತ ತಜ್ಞ ವೈದ್ಯಕೀಯ ಶಿಬಿರ. ಈ ಕಾರ್ಯಕ್ರಮದಲ್ಲಿ ಬೆಂಗಳೂರು ಸಿಟಿ ಟ್ರಾಫಿಕ್ ವೆಸ್ಟ್ ಡಿವಿಜನ್‌ನ ಡೆಪ್ಯುಟಿ ಕಮಿಷನರ್ ಆಫ್ ಪೋಲಿಸ್ ಡಾ. ಅನೂಪ್ ಎ. ಶೆಟ್ಟಿ, ಐ.ಪಿ.ಎಸ್‌ರವರನ್ನು ಗೌರವಿಸಲಾಯಿತು. ವಿವಿಧ ಆಸ್ಪತ್ರೆಗಳ ಸಹಯೋಗದೊಂದಿಗೆ ಶಿಬಿರವನ್ನು ಯಶಸ್ವಿಯಾಗಿ ಆಯೋಜಿಸಿದಂತಹ ವೈದ್ಯಕೀಯ ವಿಭಾಗದ ಚೇರ್‌ಪರ್ಸನ್ ಶ್ರೀ ಪ್ರಶಾಂತ್ ಶೆಟ್ಟಿ ಎಸ್., ಸಂಚಾಲಕರಾದ ಶ್ರೀ ಸುಪ್ರೀತ್ ಶೆಟ್ಟಿ, ಅವರ ತಂಡಕ್ಕೆ ಹಾಗೂ ಭಾಗವಹಿಸಿದಂತಹ ಎಲ್ಲಾ ಆಸ್ಪತ್ರೆಗಳ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದವರಿಗೂ ಧನ್ಯವಾದಗಳು.

ಸಂಜೆ ನಡೆದ ಸಭಾ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಖ್ಯಾತ ಚಲನಚಿತ್ರ ನಟಿ ಹಾಗೂ ಕ್ರೀಡಾಪಟು ಕುಮಾರಿ ರಚನಾ ರೈಯವರು ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಫಾದರ್ ಮುಲ್ಲರ್ ಸಂಶೋಧನಾ ಕೇಂದ್ರದ ನಿವೃತ್ತ ಪ್ರಾಧ್ಯಾಪಕರು ಮತ್ತು ಹಿರಿಯ ವಿಜ್ಞಾನಿ ಹಾಗೂ ಫಾದರ್ ಮುಲ್ಲರ್ ಮೆಡಿಕಲ್ ಕಾಲೇಜಿನ ಮಾಜಿ ಡೀನ್ ಡಾ. ಸಂಜೀವ ರೈ ಬಿ.ಯವರಿಗೆ "ದಿ. ಕೆ.ಪಿ. ರಾಮಣ್ಣ ಶೆಟ್ಟಿ ಸ್ಮಾರಕ ಶೈಕ್ಷಣಿಕ ಸಾಧಕ" ಪ್ರಶಸ್ತಿಯನ್ನು ಮತ್ತು ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರದ ಮಾಜಿ ಸಂಸತ್ ಸದಸ್ಯರು ಹಾಗೂ ಕರ್ನಾಟಕ ಬಿಜೆಪಿಯ ಮಾಜಿ ರಾಜ್ಯಾಧ್ಯಕ್ಷರಾದ ಶ್ರೀ ನಳೀನ್ ಕುಮಾರ್ ಕಟೀಲ್‌ರವರಿಗೆ "ದಿ. ಡಾ. ಜೀವರಾಜ್ ಆಳ್ವ ಸದ್ಭಾವನಾ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಈ ದಿನಾಚರಣೆಯ ಅಂಗವಾಗಿ ವಿವಿಧ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸಿದಂತಹ ಕ್ರೀಡಾ ಸಮಿತಿಯ ಚೇರ್‌ಪರ್ಸನ್ ಶ್ರೀ ಸುರೇಂದ್ರ ಶೆಟ್ಟಿ ಹಡಾಳಿ, ಸಂಚಾಲಕರಾದ ಶ್ರೀ ಸಬನ್ ಶೆಟ್ಟಿ ಗುಡಿಬೆಟ್ಟು ಮತ್ತು ಅವರ ತಂಡಕ್ಕೆ ಹಾಗೂ ಸಾಂಸ್ಕೃತಿಕ ಸಮಿತಿಯ ಚೇರ್‌ಪರ್ಸನ್ ಶ್ರೀ ರಮೇಶ್ ಜಿ. ಶೆಟ್ಟಿ, ಸಂಚಾಲಕರಾದ ಶ್ರೀ ಸಂತೋಷ್ ಶೆಟ್ಟಿ ತಲೇಕಳ ಮತ್ತು ಅವರ ತಂಡಕ್ಕೆ ಅಭಿನಂದನೆಗಳು. ದಾನಿಗಳ ನೆರವಿನಿಂದ ಸ್ಥಾಪಿಸಲಾದ ವಿವಿಧ ದತ್ತಿನಿಧಿ ಪ್ರಶಸ್ತಿಗಳಿಗೆ ಹಾಗೂ ಪ್ರತಿಭಾ ಪುರಸ್ಕಾರಗಳಿಗೆ ಅರ್ಹ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿದ ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿಯ ಚೇರ್‌ಪರ್ಸನ್ ಶ್ರೀ ಉಮೇಶ್ ಕುಮಾರ್ ಶೆಟ್ಟಿ, ಸಂಚಾಲಕರಾದ ಶ್ರೀ ಸುಧಾಕರ್ ಶೆಟ್ಟಿ ಹಟ್ಟಿಯಂಗಡಿ ಮತ್ತು ಅವರ ತಂಡಕ್ಕೆ ಅಭಿನಂದನೆಗಳು.

ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ –I ಮತ್ತು 2ರ ಶಾಲಾ ಆವರಣದಲ್ಲಿ 77ನೇ ಗಣರಾಜ್ಯೋತ್ಸವವನ್ನು ಬಹಳ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–II ರ ಪದವಿಪೂರ್ವ ವಿದ್ಯಾರ್ಥಿಗಳ ಗ್ರಾಜ್ಯುಯೇಷನ್ ದಿನವನ್ನು ದಿನಾಂಕ 31.01.2026 ರಂದು ಶಾಲಾ ಆವರಣದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಪತ್ರಕರ್ತರಾದ ದು.ಗು. ಲಕ್ಷ್ಮಣ್‌ರವರು ಆಗಮಿಸಿದ್ದರು.

ಇಂತಿ ತಮ್ಮ ಪ್ರೀತಿಯ
**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಗೌರವ ಕಾರ್ಯದರ್ಶಿ

# ಬಂಟರ ಸಂಘ ಬೆಂಗಳೂರು - ಯಕ್ಷಗಾನ ಹಾಗೂ ರಂಗತರಬೇತಿ ಸಮಿತಿ ಯಕ್ಷಗಾನ ಕಾರ್ಯಕ್ರಮ



ಸಂಘದ ಯಕ್ಷಗಾನ ಹಾಗೂ ರಂಗತರಬೇತಿ ಸಮಿತಿಯ ವತಿಯಿಂದ ದಿನಾಂಕ 19.01.2026ರಂದು ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದ 26ನೇ ವಾರ್ಷಿಕೋತ್ಸವದ ಪ್ರಯುಕ್ತ ಸಂಘದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನದಲ್ಲಿ ಸಂಘದ ಮಹಿಳಾ ಸದಸ್ಯೆಯರಿಂದ ಸುಕನ್ಯಾ ಕಲ್ಯಾಣ ಯಕ್ಷಗಾನವನ್ನು ಏರ್ಪಡಿಸಲಾಗಿತ್ತು. ಶ್ರೀ ಶಂಕರ್ ಬಾಳ್ಕುದ್ರುರವರ ನಿರ್ದೇಶನದಲ್ಲಿ ಮೂಡಿಬಂದ ಈ ಯಕ್ಷಗಾನವು ಜನರ ಮೆಚ್ಚುಗೆಗೆ ಪಾತ್ರವಾಯಿತು.



ಕಾರ್ಯಕ್ರಮದಲ್ಲಿ ಸಂಘದ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರುಗಳು, ಮಾಜಿ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರುಗಳು ಉಪಸ್ಥಿತರಿದ್ದರು.

ಯಕ್ಷಗಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ನಮ್ಮನ್ನು ಪ್ರೋತ್ಸಾಹಿಸಿದ ಹಾಗೂ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು. ಯಕ್ಷಗಾನ ಮತ್ತು ರಂಗತರಬೇತಿಯ ಎಲ್ಲಾ ಸದಸ್ಯರಿಗೂ ವಂದನೆಗಳು.

**ನೇರ ಪ್ರಾಯೋಜಕತ್ವ ನೀಡಿ ಸಹಕರಿಸಿದವರು:–**

ಹೋಟೆಲ್ ಕೃಷ್ಣ ವೈಭವ, ವಿಜಯನಗರ

**ಚರಣ್‌ರಾಜ್ ಶೆಟ್ಟಿ**
ಸಂಚಾಲಕರು
ಯಕ್ಷಗಾನ ಮತ್ತು ರಂಗತರಬೇತಿ ಸಮಿತಿ

**ಮೂಡುಬಗೆ ಸಂತೋಷ್ ಕುಮಾರ್ ಶೆಟ್ಟಿ**
ಚೇರ್‌ಪರ್ಸನ್
ಯಕ್ಷಗಾನ ಮತ್ತು ರಂಗತರಬೇತಿ ಸಮಿತಿ

# Bunts Sangha RNS Vidyanikeyan - I Graduation Day Report-2026

The Chief Guest and other dignitaries welcomed by the school band for the Graduation of ICSE, CBSE 10th Std and PU students. The programme was held at Radhabai Thimmappa Bhandary Auditorium on 9th Jan 2026. The Programme began with the invocation dance by LKG and 1st PU students.




The Principal Mrs. Usha Santosh escorted the chief guest Mrs. Ramya Suresh, Holistic value education coach, Chairman and President of Bunts Sangha CA. Ashok Shetty M., Honorary Secretary and Convener Sri Vijay J. Shetty Halady, Treasurer Sri Ashok Kumar Shetty H., Lady Vice President Mrs. Kanthi Shetty were the dignitaries on the dias. Welcome speech was rendered by the ICSE HM Mrs. Saumya Madam. The lighting of the lamp was done by the dignitaries. Sharing of thought was done by the students of ICSE, CBSE and college wing. Captains of various houses, best outgoing students and RNS Assets of ICSE, CBSE and College were presented with mementoes and certificates. The oath was administered by the Principal to the outgoing batch.




Secretary Sir spoke about the importance of education in a student's life. The Chief Guest stressed about having balanced physical, mental, emotional and spiritual health. She also spoke about inculcating S.I.K.S-start doing, improve doing, keep doing good things and stop doing bad habits. The President Sir advised the students to adhere to the oath taken, stressed about smart study and to rely friendship which goes a long way in a person's life. A vote of thanks was proposed by Ms. Sapna T.

The entire programme was compered by Ms. Vidya B. The Programme came to an end with a dance by 1st PUC students.

---

## Congratulations



Dhanya G Athikary

Bala Sanadha Hosamane Ms Dhanya G. Athikary, D/o Smt. Dayavathi G Athikary and Sri Gurudath S Athikary graduated with a Gold medal In B.Tech (Technology in Mathematics and Computing) from MS Ramaiah University of Applied Sciences on 22 December 2025. Bunts Sangha Bangalore congratulates and wishes her all the best.

# ಬಂಟರ ಸಂಘ ಆರ್.ಎನ್.ಎಸ್. ಪಿಯು ಕಾಲೇಜು ಯಲಚಗುಪ್ಪೆ ಗ್ರಾಜ್ಯುಯೇಷನ್ ಡೇ ವರದಿ

ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ–II ಯಲಚಗುಪ್ಪೆ ಆವರಣದಲ್ಲಿ ದಿನಾಂಕ 31.01.2026ರಂದು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಗ್ರಾಜ್ಯುಯೇಷನ್ ಡೇಯನ್ನು ಅತ್ಯಂತ ಸಂಭ್ರಮ ಹಾಗೂ ಘನತೆಯಿಂದ ಆಚರಿಸಲಾಯಿತು.



ವಿದ್ಯಾರ್ಥಿಗಳು ತಮ್ಮ ಜವಾಬ್ದಾರಿಯನ್ನು ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಹಸ್ತಾಂತರಿಸಿದರು. ಇದು ವಿದ್ಯಾರ್ಥಿಗಳಲ್ಲಿ ನಾಯಕತ್ವ ಹಾಗೂ ಹೊಣೆಗಾರಿಕೆಯ ಭಾವನೆ ಬೆಳೆಸುವ ಕಾರ್ಯಕ್ರಮವಾಗಿತ್ತು.

ಮುಖ್ಯ ಅತಿಥಿಗಳಾದ ದು.ಗು. ಲಕ್ಷ್ಮಣ್‌ರವರು ವಿದ್ಯಾರ್ಥಿಗಳು ಸ್ಪಷ್ಟ ಗುರಿಯನ್ನು ಇಟ್ಟುಕೊಂಡು ನಿರಂತರ ಶ್ರಮದೊಂದಿಗೆ ಅಧ್ಯಯನ ಮಾಡಬೇಕು ಎಂದು ಸಲಹೆ ನೀಡಿದರು. ಅಧ್ಯಕ್ಷರಾದ ಸಿಎ. ಅಶೋಕ್ ಶೆಟ್ಟಿ ಎಂ.ರವರು ಜೀವನದಲ್ಲಿ ಯಶಸ್ಸು ಪಡೆಯಲು ಸರಿಯಾದ ಯೋಜನೆ ಹಾಗೂ ಶಿಸ್ತು ಅಗತ್ಯವೆಂದು ತಿಳಿಸಿದರು. ಗೌರವ ಕಾರ್ಯದರ್ಶಿಯವರಾದ ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿಯವರು ಕನಸು ಕಾಣುವುದು ಮಾತ್ರವಲ್ಲ, ಆ ಕನಸುಗಳನ್ನು ನನಸಾಗಿಸಲು ಪರಿಶ್ರಮವೂ ಅತಿ ಮುಖ್ಯ ಎಂದು ಹೇಳಿದರು.



ಈ ಕಾರ್ಯಕ್ರಮಕ್ಕೆ ಪ್ರಸಿದ್ಧ ಪತ್ರಕರ್ತರಾದ ದು. ಗು. ಲಕ್ಷ್ಮಣ್‌ರವರು ಮುಖ್ಯ ಅತಿಥಿಗಳಾಗಿ ಆಗಮಿಸಿ, ವಿದ್ಯಾರ್ಥಿಗಳಿಗೆ ಪ್ರೇರಣಾದಾಯಕ ಸಂದೇಶಗಳನ್ನು ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಸಿಎ. ಅಶೋಕ್ ಶೆಟ್ಟಿ ಎಂ.ರವರು ವಹಿಸಿಕೊಂಡಿದ್ದರು. ವೇದಿಕೆಯಲ್ಲಿ ಬಂಟರ ಸಂಘದ ಮಹಿಳಾ ಉಪಾಧ್ಯಕ್ಷರಾದ ಶ್ರೀಮತಿ ಕಾಂತಿ ಶೆಟ್ಟಿ, ಗೌರವ ಕಾರ್ಯದರ್ಶಿಗಳಾದ ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿ, ಖಜಾಂಚಿಗಳಾದ ಶ್ರೀ ಅಶೋಕ್ ಕುಮಾರ್ ಶೆಟ್ಟಿ ಹೆಚ್. ಹಾಗೂ ಕಾಲೇಜಿನ ಪ್ರಾಂಶುಪಾಲರಾದ ಎಲಿಲ್ ಅರಸಿಯವರು ಉಪಸ್ಥಿತರಿದ್ದರು.

ಕಾರ್ಯಕ್ರಮದ ವಿಶೇಷ ಕ್ಷಣವಾಗಿ, ದ್ವಿತೀಯ ಪಿಯುಸಿ

ಖಜಾಂಚಿಯವರಾದ ಶ್ರೀ ಅಶೋಕ್ ಕುಮಾರ್ ಶೆಟ್ಟಿ ಹೆಚ್.ರವರು ಸಿಇಟಿ ಪರೀಕ್ಷೆಯಲ್ಲಿ 100ರರೊಳಗಿನ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ರೂ.25,000/– ನಗದು ಬಹುಮಾನ ನೀಡುವುದಾಗಿ ಘೋಷಿಸಿ ವಿದ್ಯಾರ್ಥಿಗಳಿಗೆ ಇನ್ನಷ್ಟು ಉತ್ತೇಜನ ನೀಡಿದರು. ಹಾಗೆಯೇ ಸಿಇಟಿ ಉಪನ್ಯಾಸಕರಾದ ಶ್ರೀ ಮಹೇಶ್‌ರವರು ವಿದ್ಯಾರ್ಥಿಗಳು ಸಿಇಟಿ ಪರೀಕ್ಷೆಗೆ ಹೇಗೆ ಸಿದ್ಧತೆ ನಡೆಸಬೇಕು ಎಂಬುವುದನ್ನು ವಿವರಿಸಿದರು. ಪ್ರಾಂಶುಪಾಲರಾದ ಎಲಿಲ್ ಅರಸಿಯವರು ವಿದ್ಯಾರ್ಥಿಗಳು ಉತ್ತಮ ಫಲಿತಾಂಶ ಸಾಧಿಸಿ ಕಾಲೇಜಿಗೆ ಹೆಮ್ಮೆ ತರುವಂತೆ ಆಶಿಸಿದರು.

ಈ ಕಾರ್ಯಕ್ರಮದಲ್ಲಿ ಗಣಿತ ಶಾಸ್ತ್ರದ ಉಪನ್ಯಾಸಕರಾದ ಶ್ರೀ ನಾಗರಾಜಪ್ಪರವರಿಗೆ ಹಾಗೂ ಗಣಕ ಶಾಸ್ತ್ರದ

ಶಿಕ್ಷಕರಾದ ಶ್ರೀ ಮನೋಜ್ ಕುಮಾರ್‌ರವರಿಗೆ ಉತ್ತಮ ಶಿಕ್ಷಕ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.


ಕಾರ್ಯಕ್ರಮದ ಸಾಂಸ್ಕೃತಿಕ ಭಾಗವಾಗಿ ಪ್ರಥಮ ಪಿಯುಸಿ ವಿದ್ಯಾರ್ಥಿಗಳು ಪ್ರದರ್ಶಿಸಿದ ಪದ್ಮಾವತಿ ಕಲ್ಯಾಣ, ಹುಲಿ ನೃತ್ಯ ಹಾಗೂ ಪ್ರಸ್ತುತ ಪಡಿಸಿದ ಹಾಡುಗಳು ಎಲ್ಲರ ಮನಸೂರೆಗೊಂಡವು. ದೀಪ ಬೆಳಗಿಸುವುದು ಹಾಗೂ ಪ್ರಮಾಣ ವಚನ ಸ್ವೀಕಾರ ಸಮಾರಂಭವನ್ನು ಪ್ರಾಂಶುಪಾಲರು ನಡೆಸಿಕೊಟ್ಟು, ಪದವಿ ದಿನಾಚರಣೆಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ಮನಗಾಣಿಸಿದರು. ವಿದ್ಯಾರ್ಥಿಗಳು 'ಭೂಮಿಗೆ ಬಂದ ಭಗವಂತ' ಹಾಡಿನ ಮೂಲಕ ತಮ್ಮ ಶಿಕ್ಷಕರಿಗೆ ಹೃದಯಪೂರ್ವಕ ಗೌರವ ಸಲ್ಲಿಸಿದರು.

ಗಣಿತ ಶಾಸ್ತ್ರದ ಉಪನ್ಯಾಸಕರಾದ ಶ್ರೀ ನಾಗರಾಜ್‌ರವರು ವಂದನಾರ್ಪಣೆ ಮಾಡಿದರು. ಅರ್ಪಿತಾ ಶೆಟ್ಟಿ ಹಾಗೂ ಶರ್ಮಿಳಾ ಮುರುಳಿಯವರು ಕಾರ್ಯಕ್ರಮವನ್ನು ಸುಂದರವಾಗಿ ಮತ್ತು ಶಿಸ್ತಿನಿಂದ ನಿರೂಪಿಸಿದರು. ವಿದ್ಯಾರ್ಥಿಗಳ ಪೋಷಕರು ಹಾಗೂ ಸಮಿತಿಯ ಸದಸ್ಯರ ಸಕ್ರಿಯ ಪಾಲ್ಗೊಳ್ಳುವಿಕೆಯು ಕಾರ್ಯಕ್ರಮದ ಘನತೆಯನ್ನು ಮತ್ತಷ್ಟು ಹೆಚ್ಚಿಸಿತು.

ಒಟ್ಟಾರೆಯಾಗಿ ಗ್ರಾಜ್ಯುಯೇಷನ್ ಡೇ ವಿದ್ಯಾರ್ಥಿಗಳ ಬದುಕಿಗೆ ಹೊಸ ಭರವಸೆಯನ್ನು ನೀಡುವ ಜೊತೆಗೆ, ಅವರ ವಿದ್ಯಾಭ್ಯಾಸಕ್ಕೆ ಇನ್ನಷ್ಟು ಸ್ಫೂರ್ತಿ ತುಂಬುವ ಮರೆಯಲಾರದ ಕಾರ್ಯಕ್ರಮವಾಗಿ ಮೂಡಿಬಂದಿತು.

# ಬಂಟರ ಸಂಘ ಬೆಂಗಳೂರು
# ಸಮಾಜ ಸೇವಾ ಸಮಿತಿ–2024–26

ಬೆಂಗಳೂರು ಬಂಟರ ಸಂಘದ ಸಮಾಜ ಸೇವಾ ಸಮಿತಿಯ ವತಿಯಿಂದ ನಮ್ಮ ಸಂಘದ ಸದಸ್ಯರಾದ ಶ್ರೀಮತಿ ಶ್ರೀಲತಾ ಬಿ. ಶೆಟ್ಟಿಯವರಿಗೆ ದಿನಾಂಕ 10.02.2026ರಂದು ಸಂಘದ ಆಡಳಿತ ಕಛೇರಿಯಲ್ಲಿ ಹೊಲಿಗೆ ಯಂತ್ರವನ್ನು ಸಂಘದ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರ ಸಮ್ಮುಖದಲ್ಲಿ ಹಸ್ತಾಂತರಿಸಲಾಯಿತು.



**ಕುಶಲ ಶೆಟ್ಟಿ**
ಸಂಚಾಲಕರು, ಸಮಾಜ ಸೇವಾ ಸಮಿತಿ

**ಅಜಿತ್ ಕುಮಾರ್ ಶೆಟ್ಟಿ ಕೆ.**
ಚೇರ್‌ಪರ್ಸನ್, ಸಮಾಜ ಸೇವಾ ಸಮಿತಿ

# ಬಂಟರ ಸಂಘ ಬೆಂಗಳೂರು
# ಕ್ರೀಡಾ ಸಮಿತಿ – 2024–26




ದಿನಾಂಕ 26.01.2026ರಂದು ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆಯ ಪ್ರಯುಕ್ತ ನಡೆದ ಸಮಾರಂಭದಲ್ಲಿ ಕ್ರೀಡಾ ವಿಭಾಗದ ವತಿಯಿಂದ 2025–26ನೇ ಸಾಲಿನ ಕ್ರೀಡಾ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ನೀಡಿ ಅಭಿನಂದಿಸಲಾಯಿತು. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ 13 ಜನ ಕ್ರೀಡಾ ಸಾಧಕರಿಗೆ ನೆನಪಿನ ಕಾಣಿಕೆಯೊಂದಿಗೆ ಗೌರವ ಧನವನ್ನು ನೀಡುವುದರ ಮೂಲಕ ಕ್ರೀಡಾ ಸಾಧನಾ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಸಭಾಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಖ್ಯಾತ ಚಲನಚಿತ್ರ ನಟಿ ಮತ್ತು ಕ್ರೀಡಾಪಟು ಕುಮಾರಿ ರಚನಾ ರೈಯವರು, ದಿ. ಕೆ.ಪಿ. ರಾಮಣ್ಣ ಶೆಟ್ಟಿ ಸ್ಮಾರಕ ಶೈಕ್ಷಣಿಕ ಸಾಧಕ ಪ್ರಶಸ್ತಿ ಪುರಸ್ಕೃತರಾದ ಡಾ. ಸಂಜೀವ ರೈ ಬಿ. ರವರು., ದಿ. ಜೀವರಾಜ್ ಆಳ್ವ ಸದ್ಭಾವನಾ ಪ್ರಶಸ್ತಿ ಪುರಸ್ಕೃತರಾದ ಶ್ರೀ ನಳೀನ್ ಕುಮಾರ್ ಕಟೀಲ್‌ರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಸಂಘದ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಕ್ರೀಡಾ ಸಮಿತಿಯ ಸದಸ್ಯರು ಭಾಗವಹಿಸಿದ್ದರು.





ಕ್ರೀಡಾ ಸಮಿತಿಯು ಕ್ರೀಡಾ ಸ್ಪರ್ಧೆಯನ್ನು ಯಶಸ್ವಿಯಾಗಿ ಆಯೋಜಿಸುವುದರೊಂದಿಗೆ ನಿಗದಿಪಡಿಸಿದ ಸಮಯದಲ್ಲಿ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿತು. 2025–26ನೇ ಸಾಲಿನ ಎಲ್ಲಾ ಸ್ಪರ್ಧೆಗಳನ್ನು ನಿಗದಿಪಡಿಸಿದ ಬಜೆಟ್‌ನಲ್ಲಿ ಯಶಸ್ವಿಯಾಗಿ ನಿರ್ವಹಿಸಿರುವುದು ಅತ್ಯಂತ ಸಂತೋಷದಾಯಕ ಸಂಗತಿ.







ಕ್ರೀಡಾಕೂಟದಲ್ಲಿ ಭಾಗವಹಿಸಿದ ಕ್ರೀಡಾಪಟುಗಳಿಗೆ ಮತ್ತು ಅವರನ್ನು ಹುರಿದುಂಬಿಸಲು ನೆರೆದ ಹಾಗೂ ಕ್ರೀಡಾ ಸ್ಫೂರ್ತಿ ಮೆರೆದ ಪ್ರತೀ ಬಂಟ ಸಮುದಾಯದ ಕ್ರೀಡಾಭಿಮಾನಿಗಳಿಗೆ ಮತ್ತು ಸಹಕರಿಸಿದ ಸದಸ್ಯರಿಗೆ ಕ್ರೀಡಾ ಸಮಿತಿಯ ವತಿಯಿಂದ ಹೃತ್ಪೂರ್ವಕ ಧನ್ಯವಾದಗಳು.

**ಸಬನ್ ಶೆಟ್ಟಿ ಗುಡಿಬೆಟ್ಟು**
ಸಂಚಾಲಕರು, ಕ್ರೀಡಾ ಸಮಿತಿ

**ಸುರೇಂದ್ರ ಶೆಟ್ಟಿ ಹಡಾಳಿ**
ಚೇರ್‌ಪರ್ಸನ್, ಕ್ರೀಡಾ ಸಮಿತಿ

## ವಿಜಯ ಸೌಹಾರ್ದ ಕ್ರೆಡಿಟ್ ಕೋ ಆಪರೇಟೀವ್ ಸೊಸೈಟಿ ಲಿ.,

**ವಿಜಯನಗರ, ಬೆಂಗಳೂರು – 560040**

### 2026 ರಿಂದ 2031ರ ಅವಧಿಗೆ ಚುನಾವಣೆಯಲ್ಲಿ ಆಯ್ಕೆಯಾದ ನಿರ್ದೇಶಕರ ಮಂಡಳಿ

ದಿನಾಂಕ 01.02.2026 ರಂದು ವಿಜಯ ಸೌಹಾರ್ದ ಕ್ರೆಡಿಟ್ ಕೋ ಆಪರೇಟೀವ್ ಸೊಸೈಟಿಯ ಚುನಾವಣಾ ಪ್ರಕ್ರಿಯೆಯು ಸಹಕಾರಿಯ ನಿಯಮಾನುಸಾರ ಯಶಸ್ವಿಯಾಗಿ ನಡೆದು ಸದಸ್ಯರ ಅಮೂಲ್ಯ ಮತದಾನದ ಮೂಲಕ ಆಯ್ಕೆಯಾಗಿರುವ ನಿರ್ದೇಶಕರಿಗೆ ಮತ್ತು ದಿನಾಂಕ 15.02.2026 ರಂದು ನಿರ್ದೇಶಕರಿಂದ ಆಯ್ಕೆಯಾಗಿರುವ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಿಗೆ ಸಂಸ್ಥೆಯ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.

ಸದಸ್ಯರ ಹಿತಾಸಕ್ತಿ, ಮತ್ತು ಸಂಸ್ಥೆಯ ಸಮಗ್ರ ಅಭಿವೃದ್ಧಿ ಮತ್ತು ಮುಂದಿನ ಪ್ರಗತಿಗಾಗಿ ಎಲ್ಲಾ ಸದಸ್ಯರು ಹೊಸ ಆಡಳಿತ ಮಂಡಳಿಗೆ ನಿರಂತರ ಸಹಕಾರ ನೀಡುವಂತೆ ವಿನಂತಿಸಿಕೊಳ್ಳುತ್ತೇವೆ.


ಶ್ರೀ ಇರ್ಮಾಡಿ ಜಯಪ್ರಸಾದ್ ಶೆಟ್ಟಿ
ಅಧ್ಯಕ್ಷರು


ಶ್ರೀ ಹೆಚ್ ಶ್ರೀಧರ್ ಹೆಗ್ಡೆ
ಉಪಾಧ್ಯಕ್ಷರು


ಶ್ರೀ ಬಿ ಸಂತೋಷ ಕುಮಾರ್ ಶೆಟ್ಟಿ
ನಿರ್ದೇಶಕರು


ಶ್ರೀ ಡಿ ಚಂದ್ರಹಾಸ ರೈ
ನಿರ್ದೇಶಕರು


ಶ್ರೀ ಕೆ ಪ್ರಮೋದಚಂದ್ರ ಭಂಡಾರಿ
ನಿರ್ದೇಶಕರು



ಶ್ರೀ ಟಿ ಎನ್ ಶಿವಾನಂದ ಶೆಟ್ಟಿ
ನಿರ್ದೇಶಕರು


ಶ್ರೀ ರವೀಂದ್ರನಾಥ್ ಮಾರ್ಲ
ನಿರ್ದೇಶಕರು


ಶ್ರೀಮತಿ ಮಂಜುಳಾ ಎಸ್ ಶೆಟ್ಟಿ
ನಿರ್ದೇಶಕರು


ಶ್ರೀಮತಿ ಹೀರಾ ಎ ಹೆಗ್ಡೆ
ನಿರ್ದೇಶಕರು

# ಅಭಿವೃದ್ಧಿಯಲ್ಲಿ ಜಪಾನ್ ದೇಶದ ನಾಗಾಲೋಟ



ಎಬಿ. ಶೆಟ್ಟಿ

ಎರಡನೇ ಮಹಾಯುದ್ದದಲ್ಲಿ ನಾಗಾಸಾಕಿ, ಹಿರೋಶಿಮಾ ನಗರಗಳ ಮೇಲೆ ಅಮೇರಿಕಾ ಅಣುಬಾಂಬ್ ಹಾಕಿದ್ದು, ಜಪಾನ್ ಅಕ್ಷರಶಃ ನಲುಗಿತ್ತು. ಜಗತ್ತು ಜಪಾನ್‌ನನ್ನು ವಿಶ್ವ ಭೂಪಟದಿಂದಲೇ ಬಹುತೇಕ ಅಳಿಸಿತ್ತು. ಅದರೆ, ಜಗತ್ತೇ ನಿಬ್ಬೆರಗಾಗುವಂತೆ ಜಪಾನ್ ಎದ್ದು ನಿಂತಿದೆ. ಸುಮಾರು 4.19 ಟ್ರಿಲಿಯನ್ ಡಾಲರ್ ಜಿಡಿಪಿಯೊಂದಿಗೆ ಜಗತ್ತಿನ ಐದನೇ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿದೆ. ಫೀನಿಕ್ಸ್‌ನಂತೆ ಮೇಲೆದ್ದಿದೆ, "rising from the ashes" ಗೆ ಉದಾಹರಣೆಯಾಗಿ ನಿಂತಿದೆ. ಅಣುಬಾಂಬಿನಿಂದ ಸರ್ವನಾಶವಾಗಿ ಅದರ ಪುನರ್ ನಿರ್ಮಾಣ ಅರಂಭವಾದಾಗ ಭಾರತಕ್ಕೆ ಸ್ವಾತಂತ್ರ್ಯ ದೊರಕಿದ್ದು, ಭಾರತವೂ ಅಭಿವೃದ್ಧಿಯತ್ತ ಹೆಜ್ಜೆ ಇಡಲು ಅರಂಭಿಸಿತ್ತು. ಅದರೆ, ಅಭಿವೃದ್ಧಿಯ ಓಟದಲ್ಲಿ, ದೇಶದ ಪುನರ್ ನಿರ್ಮಾಣದಲ್ಲಿ ಅವರು ನಮ್ಮಿಂದ ಮೈಲುದ್ದ ಮುಂದೆ ಇದ್ದಾರೆ. ಇದು ಹೇಗೆ ಸಾಧ್ಯವಾಯಿತು. ಅದರ ಹಿಂದಿನ ಗುಟ್ಟುಗಳೇನು ಎನ್ನುವುದನ್ನು ಕೆದಕಿದಾಗ ದೊರಕುವ ಉತ್ತರವು ಭಾರತೀಯರು ಇನ್ನೊಮ್ಮೆ ತಾವು ಹೋಗುವ ಮಾರ್ಗವನ್ನು ತಿರುಗಿ ನೋಡಿ ಪರಿಶೀಲಿಸುವಂತೆ ಮಾಡುತ್ತದೆ.

ಜಪಾನ್ ಇಂದು ಅಭಿವೃದ್ಧಿಯಲ್ಲಿ ದಾಪುಗಾಲು ಹಾಕುತ್ತಿರುವುದರ ಹಿಂದಿನ ಕಾರಣ, ಅವರು ರೂಢಿಸಿಕೊಂಡ ಶಿಸ್ತು, ದೂರಗಾಮಿ ಮತ್ತು ದೂರದೃಷ್ಟಿಯ ಧ್ಯೇಯೋದ್ದೇಶಗಳು, ತಮ್ಮ ಕಾಲ ಮೇಲೆ ತಾವು ನಿಂತುಕೊಳ್ಳಬೇಕು ಎನ್ನುವ ಸ್ವಾವಲಂಬಿತನದ ಹಠ ಮತ್ತು ಎಂಥಹ ಕಠಿಣ ಸಂದರ್ಭದಲ್ಲೂ ಎದ್ದೇಳಬೇಕು ಎನ್ನುವ ಛಲ. ಅವರ ಡಿಎನ್‌ಎದಲ್ಲಿರುವ ಈ ಗುಣಗಳು ಮತ್ತು ಅವರ ಅನುಕರಣೀಯ ಸಂಸ್ಕೃತಿ ಅವರು ಇನ್ನಿತರರನ್ನು ಹಿಂದಿಕ್ಕಿ ಮುಂದೆ ಹೋಗುವಂತೆ ಮಾಡಿದೆ. ಜಪಾನೀಯರ ಬದುಕು ಎಂದೂ ಹೂವಿನ ಹಾಸಿಗೆ ಆಗಿರಲಿಲ್ಲ. ಅವರು ಬದುಕಿನ ಪ್ರತಿಹಂತದಲ್ಲಿಯೂ ವಿವಿಧ ರೀತಿಯ ಸಂಕಷ್ಟಗಳನ್ನು ಎದುರಿಸಿ ಬಂದವರು. ಭೂಕಂಪ, ಜ್ವಾಲಾಮುಖಿ, ಸುನಾಮಿ ಮತ್ತು ಪ್ರವಾಹಗಳು ಸದಾ ಅವರ ಬಗಲಿನಲ್ಲಿ ಸಂಗಾತಿಯಾಗಿಯೇ ಇರುತ್ತವೆ. ಬಾಗಿದವನ ಬೆನ್ನ ಮೇಲೆ ಇನ್ನೊಂದು ಗುದ್ದು ಎನ್ನುವಂತೆ ಎರಡನೇ ಮಹಾಯುದ್ಧದಲ್ಲಿ ಅಮೇರಿಕಾ ಹಿರೋಶಿಮಾ ಮತ್ತು ನಾಗಾ-ಸಾಕಿ ನಗರಗಳ ಮೇಲೆ ಅಣುಬಾಂಬ್ ಹಾಕಿ ಲಕ್ಷಾಂತರ ನರಹತ್ಯೆಯಾದರೂ, ಈ ದೇಶವು ಪುನಃ ತಲೆ ಎತ್ತದಂತೆ ನಾನಾ ರೀತಿಯ ಒತ್ತಡವನ್ನು ಹಾಕಿದರೂ ಫೀನಿಕ್ಸ್‌ನಂತೆ ಪುಟಿದೆದ್ದು, ತನ್ನನ್ನು ಅಷ್ಟು ಸುಲಭವಾಗಿ ಹೊಸಕಿಹಾಕಲಾಗದೆಂದು ಜಗತ್ತಿಗೆ ಹೆಮ್ಮೆಯಿಂದ ತೋರಿಸಿದ ದೇಶ ಜಪಾನ್.

ಅವರ ಅಭಿವೃದ್ಧಿಯ ನಾಗಾಲೋಟದ ಹಿಂದಿನ ಕಾರಣಗಳೇನು?

ಅವರ ಬದುಕಿನ ವೈಖರಿ ಇರಬಹುದು, ನಡವಳಿಕೆ ಇರಬಹುದು, ಆಡಳಿತ ವ್ಯವಸ್ಥೆ ಇರಬಹುದು, ಶಿಸ್ತು, ಸ್ವಾವಲಂಬನೆ, ದೇಶಾಭಿಮಾನ ಇರಬಹುದು, ಸಮಯ ಪರಿಪಾಲನೆಯಲ್ಲಿ ಅವರನ್ನು ಇತರ ದೇಶಗಳಿಗೆ ಹೋಲಿಸಲಾಗದು. ಅವರು just class apart. ತಾವು ಬದುಕಬೇಕು ಮತ್ತು ಬದುಕಿ ಸಾಧಿಸಬೇಕು ಎನ್ನುವ ಛಲ, ಮಹಾಭಾರತದಲ್ಲಿ ಅರ್ಜುನನಿಗೆ ಪಕ್ಷಿಯ ಕಣ್ಣು ಒಂದೇ ಕಂಡಂತೆ, ಜಪಾನೀಯರಿಗೆ ತಮ್ಮ ದೇಶ ಮತ್ತು ಅಭಿವೃದ್ಧಿಯಷ್ಟೇ ಕಾಣುತ್ತದೆ. ಭಾರತದ ಮಾಧ್ಯಮದಲ್ಲಿ ರಾಜಕೀಯ, ಕ್ರಿಕೆಟ್, ಬಾಲಿವುಡ್, ಸ್ಯಾಂಡಲ್‌ವುಡ್‌ಗೆ ಹೆಚ್ಚಿನ ಪುಟ ಮೀಸಲಿದ್ದರೆ, ಜಪಾನ್ ಮಾಧ್ಯಮಗಳಲ್ಲಿ ದೇಶದ ಅಭಿವೃದ್ಧಿಯ ಸುದ್ದಿಗಳಿಗೆ ಹೆಚ್ಚಿನ ಪ್ರಾಧಾನ್ಯ ಇರುತ್ತದೆಯಂತೆ. ಟ್ರೇನ್ 35 ಸೆಕಂಡ್ ತಡವಾಗಿ ಬಂದಿರುವದಕ್ಕೆ ಟ್ರೇನ್ ಚಾಲಕ ಪ್ರಯಾಣಿಕರ ಕ್ಷಮೆ ಕೇಳಿದ ದೃಷ್ಟಾಂತ ಆ ದೇಶದಲ್ಲಿ ಇದೆಯಂತೆ. ಇದು ಅವರ ಸಮಯ ಪರಿಪಾಲನೆ ನಿಟ್ಟಿನಲ್ಲಿ ನೀಡುವ ಮಹತ್ವದ ಒಂದು ಉದಾಹರಣೆ ಮಾತ್ರ. ಅವರು ನಡೆದು ಬಂದ ದಾರಿ, ಎದುರಿಸಿದ ಸವಾಲುಗಳು, ಏರಿಳಿತಗಳು, ಅಡ್ಡಿ ಆತಂಕಗಳು, ಒಂದೇ ಎರಡೇ? ಇವೆಲ್ಲವನ್ನು ಮೆಟ್ಟಿ ನಿಂತು ಅವರು ಮುಂದೆ ಸಾಗಿದ್ದಾರೆ.

ಜಾಗತಿಕವಾಗಿ ಬೇರೆ ದೇಶಗಳ ಸಹಾಯ ಹಸ್ತವನ್ನು ಕೇಳದೇ ತಾವೇ ಸ್ವತಃ ಫೀಲ್ಡಿಗೆ ಇಳಿದು mission impossible ನ್ನು possible ಮಾಡಿ, ಇನ್ನೊಬ್ಬರ ಹಂಗು ಇಲ್ಲದೇ ಎದ್ದು ನಿಲ್ಲಬಹುದು ಎನ್ನುವ ಸಂದೇಶವನ್ನು ಜಗತ್ತಿಗೆ ತೋರಿಸಿದ್ದಾರೆ. ದೇಶದ ಜನರ ಶ್ರಮದಿಂದ, ದೇಶದ ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿಕೊಂಡು, ತಮ್ಮದೇ ತಂತ್ರಜ್ಞಾನವನ್ನು ಅಳವಡಿಸಿಕೊಂಡು ತಲುಪಬೇಕಾದ ಗುರಿಯನ್ನು ತಲುಪಿದ್ದಾರೆ. ಬಹುಷಃ ಅವರು ಟಾಟಾ ಸಮೂಹ ಕಂಪನಿಯ ಸ್ಥಾಪಕ ಜೇಮ್‌ಶೇಡಜಿ ಟಾಟಾ

ರವರು ಸದಾ ಪಠಿಸುತ್ತಿದ್ದ" ಶಿಸ್ತು, ಸಮಯ ಪರಿಪಾಲನೆ, ಕೆಲಸದಲ್ಲಿ ತನ್ಮಯತೆಯನ್ನು ಜಪಾನೀಯರು ಇನ್ನೂ ಹೆಚ್ಚಿನ ತನ್ಮಯತೆಯಿಂದ ಪಾಲಿಸಿರುವುದೇ ಅವರು ಜಾಗತಿಕವಾಗಿ ಮೇಲೆ ಬರುವುದಕ್ಕೆ ಕಾರಣ ಎಂದು ಧಾರಾಳವಾಗಿ ಹೇಳಬಹುದು.

ಸಮಯಕ್ಕೆ ಸರಿಯಾಗಿ ಬರದಿದ್ದರೆ ಭಾರತದಲ್ಲಿ ಅದಕ್ಕೆ "ಇಂಡಿಯನ್ ಟೈಮ್" ಎಂದು ಕೊಂಕಿನಲ್ಲಿ ಹೇಳುತ್ತಾರೆ. ಸಮಯಕ್ಕೆ ಸರಿಯಾಗಿ ಬಂದರೆ "ಜಪಾನ್ ಟೈಮ್: ಎಂದು ಹೆಮ್ಮೆಯಲ್ಲಿ ಹೇಳುತ್ತಾರೆ. ಜಪಾನಿಯರ ಸಮಯ ಪ್ರಜ್ಞೆ ವಿಶೇಷವಾಗಿದ್ದು, ಜಪಾನದಲ್ಲಿ ಬಸ್ಸು, ರೈಲು, ವಿಮಾನಗಳು ಸಮಯಕ್ಕೆ ಸರಿಯಾಗಿ ಓಡುತ್ತವೆ. ಸ್ವಲ್ಪ ವಿಳಂಬವಾದರೂ ಅದಕ್ಕೆ ಕ್ಷಮೆ ಕೇಳುವುದು ಸ್ವಾಭಾವಿಕವಾಗಿ ಬರುತ್ತದೆ. ಶಿಸ್ತು ಮತ್ತು ಸಮಯ ಪರಿಪಾಲನೆಯೊಂದಿಗೆ, ವೈಯಕ್ತಿಕ ಮತ್ತು ಸಾರ್ವಜನಿಕ ನೈರ್ಮಲ್ಯವನ್ನು ಕಾಪಾಡಿಕೊಳ್ಳುವುದರಲ್ಲಿ ಜಪಾನಿಯರು ಬಹು ಮುಂದೆ ಇದ್ದಾರೆ. ಸಾರ್ವಜನಿಕ ಸ್ಥಳಗಳನ್ನು ಸ್ವಚ್ಚವಾಗಿ ಇರಿಸಿಕೊಳ್ಳುವ ನಿಟ್ಟಿನಲ್ಲಿ ಅವರ ಕಾಳಜಿ ಶ್ಲಾಘನೀಯ ಎನ್ನಬಹುದು. ಯಾವುದೇ ಪ್ರದೇಶಕ್ಕೆ ಭೇಟಿ ನೀಡಿದರೂ ಎಲ್ಲಿಯೂ ಕಸ, ತ್ಯಾಜ್ಯ ಹರಡಿರುವುದನ್ನು, ಚೆಲ್ಲಾ ಪಿಲ್ಲಿಯಾಗಿ ಬಿದ್ದಿರುವುದು ನೋಡಲು ಸಿಗುವುದಿಲ್ಲ..

ಜಪಾನೀಯರು ಆರೋಗ್ಯದ ಬಗೆಗೆ ಭಾರಿ ಮುತುವರ್ಜಿ ವಹಿಸುತ್ತಾರೆ. ಬೊಜ್ಜು ಬೆಳೆಸುವುದು ಅವರಿಗೆ ಆಗದು. ಮಕ್ಕಳಾಗಲಿ, ಯುವಕರಾಗಲಿ ಅಥವಾ ವೃದ್ಧರಾಗಲಿ ಅವರು ಸದಾ ಕ್ರಿಯಾಶೀಲರಾಗಿರುತ್ತಾರೆ. ಅವರು ಸಣ್ಣ ದೂರಕ್ಕೆ ಹೆಚ್ಚಾಗಿ ಕಾಲ್ನನಡಿಗೆಯನ್ನೇ ಇಷ್ಟ ಪಡುತ್ತಾರೆ. ಸ್ಟೇಟಸ್ ಚಿಂತಿಸದೇ ಎಲ್ಲಾ ವರ್ಗದ ಜನರು ಸೈಕಲ್ ಇಷ್ಟ ಪಡುತ್ತಾರೆ ಮತ್ತು ಹೆಚ್ಚಾಗಿ ಬಳಸುತ್ತಾರೆ. ಇವರ ಕ್ರಿಯಾಶೀಲತೆ ಮತ್ತು ಚಟುವಟಿಕೆಯಿಂದಾಗಿ ಅವರು ಹೆಚ್ಚು ಅರೋಗ್ಯವಂತರಾಗಿರುತ್ತಾರೆ ಎನ್ನಲಾಗುತ್ತದೆ. ಮಹಿಳೆಯರು ಬೇರೆ ಬೇರೆ ವೃತಿಗಳಲ್ಲಿ ತೊಡಗಿರುತ್ತಿದ್ದು, ಆರೋಗ್ಯವಂತರಾಗಿರುತ್ತಾರೆ. ಜಪಾನಿಯರ ಜೀವನ ಶೈಲಿ ಇತರರಿಗಿಂತ ಭಿನ್ನವಾಗಿದ್ದು, ಅವರ ಜೀವಿತಾವಧಿ (life span) ಜಗತ್ತಿನಲ್ಲಿ ಬೇರೆ ದೇಶದವರಿಗಿಂತ ಹೆಚ್ಚಾಗಿದ್ದು, ಅಂತೆಯೇ ಜಪಾನ್ ದೇಶದಲ್ಲಿ ವೃದ್ಧರ ಸಂಖ್ಯೆ ಹೆಚ್ಚು ಎಂದು ಹೇಳಲಾಗುತ್ತಿದ್ದು ಸುಮಾರು 2 ಮಿಲಿಯನ್ ಜನರು 90 ವರ್ಷ ದಾಟಿದವರು. ಅವರಲ್ಲಿ 100 ವರ್ಷ ಆಯಸ್ಸನ್ನು ದಾಟಿದವರು 69785 ಇದ್ದಾರಂತೆ. ಮಹಿಳೆಯರು ಪುರುಷರಿಗಿಂತ ಹೆಚ್ಚು ವರ್ಷ ಬದುಕುತ್ತಿದ್ದು ಜಪಾನೀಯರು ಸರಾಸರಿ ಜೀವತಾವಧಿ 84.2 ವರ್ಷ ಇದ್ದರೆ ಪುರುಷರ ಜೀವಿತಾವಧಿ 81.1 ವರ್ಷ ಮತ್ತು ಮಹಿಳೆಯರ ಜೀವಿತಾವಧಿ 87.12 ವರ್ಷವಂತೆ. ಅವರ ದೀರ್ಘಾಯುಷ್ಯದ ಕಾರಣ ಜನ ಸಾಮಾನ್ಯರು ಅಭಿಪ್ರಾಯಪಡುವಂತೆ ಡಿಎನ್ಎ ಆಗಿರದೇ, ಅವರ ಆಹಾರ ಮತ್ತು ಜೀವನ ವೈಖರಿ ಎನ್ನಲಾಗುತ್ತದೆ. ಅವರು ಹಣ್ಣು ತರಕಾರಿ, ಮತ್ತು ಪ್ರೊಸೆಸ್ ಮಾಡದ ಅಹಾರವನ್ನು ಹೆಚ್ಚು ತಿನ್ನುತ್ತಾರಂತೆ. ಅಂತೆ ಅವರಲ್ಲಿ ಬೊಜ್ಜುತನ 3.60% ಸೀಮಿತವಾಗಿದ್ದು, ಅದು ಜಗತ್ತಿನಲ್ಲಿಯೇ ಅತಿ ಕಡಿಮೆ ಎನ್ನುವ ಟ್ಯಾಗ್ ಈ ದೇಶಕ್ಕೆ ಇದೆ.. ಹಾಗೆಯೇ ಅವರ ಅಹಾರದಲ್ಲಿ ಮೀನು ಮತ್ತು ರೆಡ್ ಮೀಟ್ ಹೆಚ್ಚಿಗೆ ಇರುತ್ತಿದ್ದು ವಿಶ್ವದಲ್ಲಿ ಅತಿ ಹೆಚ್ಚು ಮೀನು ತಿನ್ನುವ 6 ರಾಷ್ಟ್ರಗಳಲ್ಲಿ ಒಂದು ಎನ್ನಲಾಗುತ್ತಿದೆ. ಅವರ ಅಹಾರದಲ್ಲಿ ಕೊಲೆಸ್ಟ್ರಾಲ್ ಕಡಿಮೆ ಇರುವುದರಿಂದ ಮತ್ತು ಅವರು ಹೆಚ್ಚು ಚಹಾವನ್ನು ಸೇವಿಸುವುದರಿಂದ ಅವರು ಇನ್ನಿತರ ದೇಶದವರಿಗಿಂತ ಹೆಚ್ಚು ಆರೋಗ್ಯವಂತರಂತೆ. ಹಾಗೆಯೇ ಅವರು ಹೆಚ್ಚು ಸೋಯಾವನ್ನು ಸೇವಿಸುತ್ತಿದ್ದು, ಅದು ಅವರ ಆರೋಗ್ಯದ ಗುಟ್ಟು ಎನ್ನುತ್ತಾರೆ. ಜಪಾನ್ ಸರ್ಕಾರವು ಕಡಿಮೆ ಆದಾಯದ ಸುಮಾರು 90% ಜನರ 70% ಆರೋಗ್ಯ ವೆಚ್ಚವನ್ನು ಭರಿಸುತ್ತದೆ. ವೃದ್ಧರು ಸದಾ ಚಟುವಟಿಕೆಯಲ್ಲಿ ಇರುತ್ತಿದ್ದು, ಇದು ಅವರ ದೀರ್ಘಾಯುಷ್ಯದ ಗುಟ್ಟು ಎಂದು ಅವರು ಹೇಳುತ್ತಾರೆ.

ಜಪಾನೀಯರು ಕ್ರೀಡಾ ಕ್ಷೇತ್ರದಲ್ಲಿ ಇನ್ನಿತರ ಯಾವ ದೇಶಗಳಿಗೆ ಸವಾಲು ಹಾಕುವಂತೆ ಇದ್ದಾರೆ ಮತ್ತು ಕ್ರೀಡೆಗೆ ಅಲ್ಲಿನ ಸರ್ಕಾರ ಹೆಚ್ಚಿನ ಆದ್ಯತೆ ನೀಡುತ್ತದೆ. ಜಪಾನ್ ನೈಸರ್ಗಿಕ ವಿಪತ್ತುಗಳಿಗೆ ನಿರಂತರವಾಗಿ ಬಲಿಯಾಗುತ್ತಿದ್ದು. ಸರ್ಕಾರ ಈ ನಿಟ್ಟಿನಲ್ಲಿ ಸಾಕಷ್ಟು ಮುಂಜಾಗೃತೆಯನ್ನು ತೆಗೆದುಕೊಳ್ಳುತ್ತಿದ್ದು, ಸಾವು ಮತ್ತು ನೋವನ್ನು ನಿಯಂತ್ರಿಸುತ್ತಿದೆ. ಆದರೂ ಅದು ಪ್ರತಿ ವರ್ಷ ಅಪಾರ ಸಾವು ನೋವನ್ನು ಅನುಭವಿಸುತ್ತಿರುವುದು ದುರ್ದೈವ.

ಭಾಷೆ ಮತ್ತು ಸಂಸ್ಕೃತಿ ದೃಷ್ಟಿಯಲ್ಲಿ ಜಪಾನೀಯರು ಭಾರೀ ಸ್ವಾಭಿಮಾನಿಗಳು. ಅಂತೆಯೇ ಸ್ವಾಭಿಮಾನಕ್ಕೆ ಇನ್ನೊಂದು ಹೆಸರು "ಜಪಾನ್" ಎನ್ನುತ್ತಾರೆ ಇಡೀ ಜಗತ್ತೇ ಇಂಗ್ಲೀಷ್ ಮಯವಾದರೂ, ಜಪಾನಿಯರು ಮಾತ್ರ ತಮ್ಮ ಭಾಷೆಯನ್ನು ಬಿಟ್ಟುಕೊಟ್ಟಿಲ್ಲ. ಜಪಾನೀನಲ್ಲಿ ಬದುಕು ಸಾಗಿಸಲು ಜಪಾನಿ ಭಾಷೆಯನ್ನು ಕಲಿಯಲೇ ಬೇಕಾಗುತ್ತದೆ. ಅಂತೆಯೇ ಭಾರತೀಯರು ವಲಸೆ ಹೋಗಲು ಪಾಶ್ಚಿಮಾತ್ಯ ದೇಶಗಳನ್ನು ಅಯ್ಕೆ ಮಾಡಿಕೊಳ್ಳುತ್ತಾರೆ ವಿನಃ ಜಪಾನ್ ದೇಶ ಅವರ ರಾಡಾರ್‌ನಲ್ಲಿ ಇರುವುದಿಲ್ಲ ಎನ್ನಲಾಗುತ್ತದೆ ಮಕ್ಕಳ ಮತ್ತು ಯುವಕರ ಶಿಕ್ಷಣ ಸರ್ಕಾರದ ಆದ್ಯತೆಯ ಪಟ್ಟಿಯಲ್ಲಿ ಇದ್ದು ಸರ್ಕಾರ ಈ ನಿಟ್ಟಿನಲ್ಲಿ ಭಾರೀ ಕಾಳಜಿ ವಹಿಸುತ್ತದೆ. ಅಭಿವೃದ್ಧಿ ನಿಟ್ಟಿನಲ್ಲಿ ಜಪಾನ್ ಭಾರತಕ್ಕೆ ಮಾದರಿಯಾಗಿದ್ದರೆ, ಜಾಗತಿಕ ಅರ್ಥಿಕತೆಯಲ್ಲಿ ಭಾರತ ಒಂದನೇ ಸ್ಥಾನದಲ್ಲಿ ಇರುತ್ತಿತ್ತೇನೋ?

# ಬಂಟರ ಸಂಘ ಬೆಂಗಳೂರು–ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ 2024–26




ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿಯ ವತಿಯಿಂದ ದಿನಾಂಕ 26.01.2026, ಸೋಮವಾರದಂದು ಸಂಘದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆ ಕಾರ್ಯಕ್ರಮದಲ್ಲಿ ದಾನಿಗಳಿಂದ ಕೊಡಮಾಡುವ **ದತ್ತಿನಿಧಿ ಪ್ರಶಸ್ತಿ**ಯನ್ನು ಅರ್ಹ **36** ವಿದ್ಯಾರ್ಥಿಗಳಿಗೆ ಒಟ್ಟು ರೂ. **2,82,500/–**ನ್ನು ಚೆಕ್ ಮತ್ತು ಪ್ರಶಸ್ತಿ ಫಲಕವನ್ನು ಕಾರ್ಯಕ್ರಮದಲ್ಲಿ ಹಸ್ತಾಂತರಿಸಲಾಯಿತು. **ಪಿಯುಸಿ**ಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ **50** ವಿದ್ಯಾರ್ಥಿಗಳಿಗೆ ತಲಾ ರೂ.**3000/–**ನಂತೆ ಒಟ್ಟು ರೂ. **1,50,000/–** ಮತ್ತು **ಎಸ್.ಎಸ್.ಎಲ್.ಸಿ.**ಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ **36** ವಿದ್ಯಾರ್ಥಿಗಳಿಗೆ ತಲಾ ರೂ. **2,000/–**ನಂತೆ ರೂ. **72,000/–** ಪ್ರತಿಭಾ ಪುರಸ್ಕಾರವನ್ನು ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ನೇರವಾಗಿ ವರ್ಗಾಹಿಸಲಾಯಿತು ಮತ್ತು ಪ್ರಶಸ್ತಿ ಪತ್ರವನ್ನು ಅವರ ಮನೆ ವಿಳಾಸಕ್ಕೆ ಅಂಚೆ ಮೂಲಕ ಕಳುಹಿಸಲಾಗಿದೆ.





ಮುಖ್ಯ ಅತಿಥಿಗಳಾಗಿ ಖ್ಯಾತ ಚಲನಚಿತ್ರ ನಟಿ ಮತ್ತು ಕ್ರೀಡಾಪಟು ಕುಮಾರಿ ರಚನಾ ರೈಯವರು, ದಿ. ಕೆ.ಪಿ. ರಾಮಣ್ಣ ಶೆಟ್ಟಿ ಸ್ಮಾರಕ ಶೈಕ್ಷಣಿಕ ಸಾಧಕ ಪ್ರಶಸ್ತಿ ಪುರಸ್ಕೃತರಾದ ಡಾ. ಸಂಜೀವ ರೈ ಬಿ. ರವರು., ದಿ. ಜೀವರಾಜ್ ಆಳ್ವ ಸದ್ಭಾವನಾ ಪ್ರಶಸ್ತಿ ಪುರಸ್ಕೃತರಾದ ಶ್ರೀ ನಳೀನ್ ಕುಮಾರ್ ಕಟೀಲ್‌ರವರು ಮತ್ತು ಬಂಟರ ಸಂಘದ ಅಧ್ಯಕ್ಷರಾದ ಸಿ.ಎ. ಅಶೋಕ್ ಶೆಟ್ಟಿ ಎಂ.ರವರು ಹಾಗೂ ಪದಾಧಿಕಾರಿಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ದತ್ತಿ ನಿಧಿ ಪ್ರಶಸ್ತಿಗಳನ್ನು ನೀಡಿದ ದಾನಿಗಳಾದ ಶ್ರೀ ವಿಕ್ರಮ್ ಶೆಟ್ಟಿ, ಶ್ರೀಮತಿ ಮೀರಾ ಕೃಷ್ಣಪ್ಪ, ಶ್ರೀ ಗುಣಪಾಲ್ ಶೆಟ್ಟಿ, ಶ್ರೀಮತಿ ಶೋಭಾ ಮತ್ತು ಶ್ರೀ ಮೋಹನ್‌ದಾಸ್ ಶೆಟ್ಟಿ, ಶ್ರೀಮತಿ ಶಕೀಲಾ ಎಸ್. ಶೆಟ್ಟಿಯವರನ್ನು ವೇದಿಕೆಯಲ್ಲಿ ಗೌರವಿಸಲಾಯಿತು ಹಾಗೂ ಉಪಸ್ಥಿತರಿದ್ದ ದಾನಿಗಳು ನೀಡಿದ ಪ್ರಶಸ್ತಿಯನ್ನು ಅವರಿಂದಲೇ ವಿದ್ಯಾರ್ಥಿಗಳಿಗೆ ಕಾರ್ಯಕ್ರಮದಲ್ಲಿ ಹಸ್ತಾಂತರಿಸಲಾಯಿತು. ಪ್ರಾಸ್ತಾವಿಕ ಮಾತುಗಳನ್ನಾಡಿದ ಚೇರ್‌ಪರ್ಸನ್ ಶ್ರೀ ಉಮೇಶ್ ಕುಮಾರ್ ಶೆಟ್ಟಿಯವರು ಬಡ್ಡಿರಹಿತ ವಿದ್ಯಾರ್ಥಿ ವೇತನವನ್ನು ಪಡೆದ ವಿದ್ಯಾರ್ಥಿಗಳನ್ನು ಸಂಪರ್ಕಿಸಿದಾಗ ಸ್ವಇಚ್ಛೆಯಿಂದ ಒಟ್ಟು 15 ಲಕ್ಷದಷ್ಟು ಮೊತ್ತವನ್ನು ಇಲ್ಲಿಯವರೆಗೆ ವಿದ್ಯಾರ್ಥಿಗಳು ವಾಪಾಸ್ಸು ನೀಡಿದ್ದಾರೆ. ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿಯು ಕಳೆದ ಎರಡು ವರ್ಷಗಳಲ್ಲಿ ಸರಿ ಸುಮಾರು ಒಂದು ಕೋಟಿಯಷ್ಟು ಮೊತ್ತವನ್ನು ವಿದ್ಯಾರ್ಥಿಗಳಿಗೆ ಹಸ್ತಾಂತರಿಸಲು ಸಹಕರಿಸಿದ ಅಧ್ಯಕ್ಷರು, ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿಯ ಎಲ್ಲಾ ಸದಸ್ಯರುಗಳಿಗೆ ಅಭಿನಂದನೆ ಸಲ್ಲಿಸಿದರು. ದತ್ತಿ ನಿಧಿ ಪ್ರಶಸ್ತಿ ಮತ್ತು ಪ್ರತಿಭಾ ಪುರಸ್ಕಾರ ಪಡೆದ ಎಲ್ಲಾ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದರು.

**ಸುಧಾಕರ ಶೆಟ್ಟಿ ಹಟ್ಟಿಯಂಗಡಿ**
ಸಂಚಾಲಕರು
ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ
ಮೊ.: 94490 89993

**ಉಮೇಶ್ ಕುಮಾರ್ ಶೆಟ್ಟಿ**
ಚೇರ್‌ಪರ್ಸನ್
ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ
ಮೊ.: 97412 20559

# ಬಂಟರ ಸಂಘ ಬೆಂಗಳೂರು - ವೈದ್ಯಕೀಯ ಮತ್ತು ವಿಮಾ ಸಮಿತಿ - 2024-26
## ಉಚಿತ ತಜ್ಞ ವೈದ್ಯಕೀಯ ಶಿಬಿರ






ಗಣರಾಜ್ಯೋತ್ಸವ ಮತ್ತು ಬಂಟರ ಸಂಘದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆ ದಿನವಾದ ದಿನಾಂಕ 26.01.2026 ರಂದು ಜ್ಯೋತಿ ಬೆಳಗುವುದರೊಂದಿಗೆ ಕಾರ್ಯಕ್ರಮಕ್ಕೆ ಅಧಿಕೃತ ಚಾಲನೆ ನೀಡಲಾಯಿತು. ಸಂಘದ ಅಧ್ಯಕ್ಷರಾದ ಸಿಎ. ಅಶೋಕ್ ಶೆಟ್ಟಿ ಎಂ., ಉಪಾಧ್ಯಕ್ಷರಾದ ಶ್ರೀಮತಿ ಕಾಂತಿ ಶೆಟ್ಟಿ, ಗೌರವ ಕಾರ್ಯದರ್ಶಿಗಳಾದ ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿ ಮತ್ತು ವೈದ್ಯಕೀಯ ವಿಭಾಗದ ಚೇರ್‌ಪರ್ಸನ್‌ರಾದ ಪ್ರಶಾಂತ್ ಶೆಟ್ಟಿ ಎಸ್. ಸಂದರ್ಭೋಚಿತ ನುಡಿಗಳನ್ನಾಡಿದರು. ಕಾರ್ಯಕ್ರಮದಲ್ಲಿ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ವೈದ್ಯಕೀಯ ವಿಭಾಗದ ಸದಸ್ಯರು ಮತ್ತು ಸಂಘದ ಸದಸ್ಯರು ಪಾಲ್ಗೊಂಡರು. ವೈದ್ಯಕೀಯ ವಿಭಾಗದ ಸಂಚಾಲಕರಾದ ಸುಪ್ರೀತ್ ಶೆಟ್ಟಿಯವರು ಧನ್ಯವಾದ ಸಮರ್ಪಣೆಗೈದರು.







ಸಂಘದ ಆವರಣದಲ್ಲಿ ಸಂಘದ ವೈದ್ಯಕೀಯ ವಿಭಾಗ ಮತ್ತು ವಿವಿಧ ಆಸ್ಪತ್ರೆಗಳ ಸಹಯೋಗದೊಂದಿಗೆ ಉಚಿತ ತಜ್ಞ ವೈದ್ಯಕೀಯ ಶಿಬಿರವನ್ನು ಯಶಸ್ವಿಯಾಗಿ ನಡೆಸಲಾಯಿತು. ಸುಮಾರು 400 ಕ್ಕೂ ಹೆಚ್ಚು ಜನರು ಇದರ ಪ್ರಯೋಜನವನ್ನು ಪಡೆದರು. ಫೋರ್ಟಿಸ್ ಆಸ್ಪತ್ರೆ ನಾಗರಭಾವಿ – ಹೃದಯ ತಪಾಸಣೆ ಮತ್ತು ಸ್ತ್ರೀ ರೋಗ ತಪಾಸಣೆ, ಎಸೆನ್ಷಿಯಲ್ ಆಸ್ಪತ್ರೆ ಮತ್ತು ಸ್ಪೈನ್ ಕೇರ್ ಆಸ್ಪತ್ರೆ – ಕೀಲು ಮತ್ತು ಮೂಳೆ ಪರೀಕ್ಷೆ ಹಾಗೂ ಬೋನ್ ಡೆನ್ಸಿಟಿ ಪರೀಕ್ಷೆ ಮಾಡಿದರು. ಪ್ರೀಮಿಯರ್ ಸಂಜೀವಿನಿ ಆಸ್ಪತ್ರೆ – ನೋಂದಣಿ ಮತ್ತು ಸಾಮಾನ್ಯ ಪರೀಕ್ಷೆಗಳಾದ ರಕ್ತದ ಸಕ್ಕರೆ ಪರೀಕ್ಷೆ, ರಕ್ತದೊತ್ತಡ, ಇಸಿಜಿ ಪರೀಕ್ಷೆ ಮಾಡಲಾಯಿತು. ಈಶ್ವರ್ ಮಲ್ಪೆ ತಂಡದಿಂದ ಶ್ರವಣ ಪರೀಕ್ಷೆ ಮಾಡಲಾಯಿತು.







ಲಯನ್ಸ್ ಮತ್ತು ಅನನ್ಯ ತಂಡದಿಂದ ರಕ್ತದಾನ ಮೂಲಕ ಸುಮಾರು 50 ಬಾಟಲಿಗೂ ಹೆಚ್ಚು ರಕ್ತವನ್ನು ಸಂಗ್ರಹಿಸಲಾಯಿತು. ಮಧ್ಯಾಹ್ನ ಸಂಘದ ವೇದಿಕೆಯಲ್ಲಿ ಫೋರ್ಟಿಸ್ ಆಸ್ಪತ್ರೆ ತಂಡದಿಂದ ತುರ್ತು ಹೃದಯಾಘಾತ ಸಂದರ್ಭದಲ್ಲಿ ನೀಡಬೇಕಾದ ಸಿ.ಪಿ.ಆರ್. ಡೆಮೋ ಪ್ರಾತ್ಯಕ್ಷತೆ ನಡೆಸಲಾಯಿತು. ಅದೇ ಸಂಜೆ ನಡೆದ ಸಭಾ ಕಾರ್ಯಕ್ರಮದಲ್ಲಿ ಹಾಜರಿದ್ದ ಗಣ್ಯರು, ಪದಾಧಿಕಾರಿಗಳ ಸಮ್ಮುಖದಲ್ಲಿ ವಿವಿಧ ಆಸ್ಪತ್ರೆಗಳೊಂದಿಗೆ ಬಂಟರ ಸಂಘದ ಸದಸ್ಯರಿಗೆ ರಿಯಾಯಿತಿ ದರದಲ್ಲಿ ಚಿಕಿತ್ಸೆ ನೀಡುವ ಒಡಂಬಡಿಕೆಯನ್ನು ಸಾಂಕೇತಿಕವಾಗಿ ಉದ್ಘಾಟನೆ ಮಾಡಲಾಯಿತು. ಈ ಕಾರ್ಯಕ್ರಮದ ಬಗ್ಗೆ ವೈದ್ಯಕೀಯ ವಿಭಾಗದ ಚೇರ್‌ಪರ್ಸನ್ ಶ್ರೀ ಪ್ರಶಾಂತ್ ಶೆಟ್ಟಿ ಎಸ್. ರವರು ನೆರೆದ ಸಭೆಗೆ ವಿವರಿಸಿದರು ಮತ್ತು ಈ ಒಡಂಬಡಿಕೆಯ ಸಂಪೂರ್ಣ ವಿಸ್ತಾರವಾದ ಮಾಹಿತಿಯನ್ನು ಸ್ನೇಹಚಿಂತನ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

ವೈದ್ಯಕೀಯ ಶಿಬಿರ ಮತ್ತು ಎಲ್ಲಾ ಕಾರ್ಯಕ್ರಮಕ್ಕೂ ಅದ್ಭುತ ಸಹಕಾರ ನೀಡಿದ ಸಂಘದ ಆಡಳಿತ ಮಂಡಳಿ, ಆತ್ಮೀಯ ಕಾರ್ಯಕಾರಿ ಸಮಿತಿ ಸದಸ್ಯರಿಗೂ, ಪ್ರಯೋಜನ ಪಡೆದ ಸಂಘದ ಸದಸ್ಯರಿಗೂ, ಸಾರ್ವಜನಿಕರಿಗೂ, ವೈದ್ಯಕೀಯ ಉಪಸಮಿತಿ ಸದಸ್ಯರಿಗೂ ಹಾಗೂ ಯಶಸ್ವಿ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಎಲ್ಲಾ ಆಸ್ಪತ್ರೆಗಳಿಗೂ, ಸಂಸ್ಥೆಗಳಿಗೂ ವಂದನೆಗಳು ಮತ್ತು ಹೃತ್ಪೂರ್ವಕ ಧನ್ಯವಾದಗಳು.

**ಸುಪ್ರೀತ್ ಶೆಟ್ಟಿ**
ಸಂಚಾಲಕರು, ವೈದ್ಯಕೀಯ ಸಮಿತಿ

**ಪ್ರಶಾಂತ್ ಶೆಟ್ಟಿ ಎಸ್.**
ಚೇರ್‌ಪರ್ಸನ್, ವೈದ್ಯಕೀಯ ಸಮಿತಿ

---

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

No. 324, Bunts' Sangha Complex, Vijayanagar Bangalore-560040
Tel: 23399323/23399636, Email: info@buntsanghablr.com

Invites applications for the post of

**HOSTEL WARDEN (LADIES HOSTEL)**

**Requirements:** Minimum PUC and Experience as Warden for minimum 2 years or assistant warden for 3 years in any of the Hostel.

Application with all the relevant details may be forwarded to the Hon. Secretary before 30.03.2026.

Sd/-

Hon. Secretary

# ಬಂಟರ ಸಂಘ ಬೆಂಗಳೂರು
# ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿ – 2024–26

**ಬೆಂಗಳೂರು ಬಂಟರ ಸಂಘದ 2025–26 ನೇ ಸಾಲಿನ ದತ್ತಿ ನಿಧಿ ಪ್ರಶಸ್ತಿ ಹಾಗೂ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ನೀಡಿದ ಪ್ರತಿಭಾ ಪುರಸ್ಕಾರದ ವಿವರಗಳು ಈ ಕೆಳಗಿನಂತಿದೆ:–**

| S.N. | List of Endowment Awards | Name | Parents | Achievements |
|---|---|---|---|---|
| 1 | Mr. C.L Naik Memorial Award for the **Best Outgoing Engineering Student** | Balasanada Hosamane Dhanya Athikary | S Gurudath / Dayavathi Athikary | Dr. M S Ramaish Gold Medal in engineering - CGPA final year - 9.39% |
| 2 | Dr. K.K Hegde Memorial Award For the **Best Outgoing Medical Student** | Tarun Shetty | B Suresh Shetty / Shalini S Shetty | Persuing Final year MBBS - 69% |
| 3 | Mr. M. Sunder Ram Shetty Memorial Award for the **Best Outgoing Commerce Student** | Samartha | Govinda Shetty / Savitha | B.Com graduate from Mangalore University, CGPA -9.54 |
| 4 | Mrs. Ammanni Ramanna Shetty Memorial Award for the **Best All round Girl Student** | Lekana Hegde | Mallikarjuna Hegde / Kanthi Shetty | Miss Universe India- Finalist, Miss Universe - Karnataka- runner Up, Brand Ambassidor of Tanishq jewellary, Basket ball - Represented 17 times from Karnataka State. |
| 5 | Mr. Charmakki Narayana Shetty Award for the **Best outgoing Law Student.** | Nikisha Shetty | Balakrishna Shetty / Vinoda Shetty | B.Com completed , Pursiung LLB |
| 6 | Mrs. Akkayya N. Shetty Award for the **Best Outgoing Dental Student** | Dr. Nidhi S Shetty | Santhosh Kumar Shetty / Bharathi S Shetty | Studying MDS in Rajarajeshwari College. Won prize at National Level essay competition organized by ISPPD. Won the best paper award at State Conference at Karwar. |
| 7 | Mr. K.P Ramanna Shetty Award for the Best **B.Sc Agriculture / PUC Science - Student** | Sahana S Shetty | Santhosh K Shetty / Rekha S Shetty | Secured 8.26 CGPA in B.Sc Agriculture. Pursiung 3rd year. |
| 8 | Mr. H.T Bhandary Award for the **Best Student in Sports** | Adithya G K Shetty | S Krishna Shetty / Gayathri K Shetty | Athletics -National and Inter National Athletic player - represented 11 times . National level 400Mtr - national, State Level - represented 13 times. National Technical Official Exam - Para Olympic Committee of India. |
| 9 | Mr. P.S Thimmappa Shetty Memorial Award for **Any Achievement for Excellence** | Sahaj C Shetty | Chandrahasa / Jayalakshmi C Shetty | Successfully cleared AFCAT 2024 and Engg. In Aerospace completed with first class in 2024 and Proudly commissioned as a Fighter Pilot in IAF 2025. He secured All India Rank 29 in AFCAT and Rank 7 in the Pilot Selection, and successfully completed flying training on the Pilatus aircraft at the Air Force Academy, Dundigal. |
| 10 | Ms. Sheetal Krishnappa Memorial Award for a **Girl showing All-round Excellence** | Sammya R Shetty | Raghuram Shetty / Shyamala Shetty | Completed BCA and pursuing MBA in 1st class with Distinction. Won the 1st prize in Group folk dance in State Leve l- VIBHINNA. |
| 11 | Master Jayasheel G. Shetty Memorial Award for the Outstanding Student in B.E (Electronics) or any other branch of Engineering | Manasvi M Shetty | Manohar K Shetty / Asha M Shetty | BE Architect - Class topper . Secured Silver Medal. |
| 12 | Miss. Raksha Rai Memorial Award for **Excellence in Classical Music.** | K Samruddhi Shetty | M Umesh Shetty / K Chandramathi Shetty | Pursuing BE - 1st year. Voice of the Live Studio - Season 1 - 2nd Runner Up. |
| 13 | Sri Mullad Laxmi Sheenappa Shetty Award for **Best Veterinary Sceince student or any achievement in Veterinary Science field** | Daksha Shetty | Sudhir Shetty / Seema S Shetty | Secured 95.5% in 2nd PUC and studying in Vaterinary Scoince at College of Sri Bhaurav Deshpande Veternary College, Belagavi. |
| 14 | Smt. Kenjooru Nayakara Mane Doddakka Ananth Shetty Memorial Award for the **Best Outgoing Female Medical Student.** | Kshithija Shetty J | Jayaram Shetty H/ Jalaja Shetty J | 73% in MBBS Final year. |
| 15 | Sri. Maralimane Ananth Shetty Memorial Award for the **Best Outgoing Ophthalmologist" or any other Post Graduation in Medicine.** | Dr. Manish R Shetty | Rathnakar Shetty / Shrimathi R Shetty | 1st Prize in PEDAGOGY Competition, 2nd prize in paper presentation. Currently position in Senior Resident in KMC Manipal. |
| 16 | Miss. Raksha M Shetty Memorial Award for **Excellence in Classical Dance** | Sadhwin S Shetty | Satheesh Kumar B Shetty / Mamatha S Shetty | First South India -Runner Up , Dance Karnataka Dance- Winner , Worked in Bollywood movie Choreographer. |

| | | | | |
|---|---|---|---|---|
| 17 | Sri Mohandas N Hegde Memorial Award for the **Best Law Student** | Arpitha Shetty | Dinakar Shetty/ Shreemathi Shetty | Law Student |
| 18 | Sri. Niddodi Premdas Shetty Memorial Award for **All-round Excellence Boy Rural Student.** | Prathvish | Jayaprakash Shetty / Revathi Shetty | B.Com - final year- Overall CGPA 8.56, Pursuing MBA in CMR College, Kalyan Nagar, Bangalore. District Level Kabaddi player and Athlet . |
| 19 | Kolkebail Nadumane Shrimathi Vanajakshi Karunakar Shetty Memorial Award for **All-round Excellence Girl Student.** | Raksha R Shetty | Ravindra H/ Shubhashini H A | Represented 3 times in Chess Competition - State Level, SSLC- 5th Rank in state 621/625. |
| 20 | Vandar Thenkabettu Balakrishna Shetty Memorial Award for Highest Scoring Girl in **Bachelor of Commerce and pursuing Higher Studies** | Sahara S Shetty | Shivaram Shetty / Jyothi Shetty | Best outgoing student award - MBA -2025, CSEET foundation cleared, CA Aspirant. |
| 21 | Dr K Nagappa Alva & Smt. Kalyani Alva memorial award' for Academic Excellence in the **field of Science, Commerce & Arts** (Arts) | Ananya Shetty | Shekar Shetty / Rajashree Shetty | BE - CGPA -9.53 , ISE - 4th Rank, 3rd place in Software open day at College. |
| 22 | Dr K Nagappa Alva & Smt. Kalyani Alva memorial award' for **Excellence in the field of Cultural (Art, Music, Dance, Yakshagana, Drama etc.)** | Talekana Srusti Shetty | Talekana Radhakrishna Shetty / Amitha Alva | Won the Golden Art Award in Colouring/ handwriting/ Cartoon Making / Collage Competition - rangotsav Celebration - Organization for National level Art Competition -at Mumbai - Maharastra. Presently she is studying in MBBS 1st year. 1st place in school zonal Karate Competition. |
| 23 | 'Dr K Nagappa Alva & Smt Kalyani Alva Memorial Award' for **Excellence in the field of Sports, Yoga.** | Shravya V Shetty | Vittala Shetty / Susheela | Secured1st in VTU Weight lifting inter collegiate state level held at GAT. Secured 2nd in state level hammer throw VTU Competition. Secured 1st pla e in state level weight lifting held at AIET. Secured gold in state Hammer throw at Shivamogga. |
| 24 | 'Mr. Kishan Jaladhar Shetty Award for **Best Outgoing Management Student or any other Excellence.** | Deeksha R Shetty | H Raghuchandra Shetty / Thara R Shetty | Aerospace Engineering- Secured 3rd Rank with a GPA of 9.08 in tha Bachelor of Technology in Aerospace Engineering. Studied at Dayananda Sagar University. |
| 25 | Ladies Wing Rajatha Sambhrama Memorial Award for **Highest Scoring girl in SSLC.** | Sukhi S Shetty | Surya Shetty / Shalini S Shetty | 620/625, 6th State rank in SSLC |
| 26 | Ladies Wing Rajatha Sambhrama Memorial Award for **Highest Scoring girl in II PUC.** | Asthi S Shetty | Sathishchandra Shetty / Anupama S Shetty | 596/600, State 4th Rank in PUC |
| 27A | Late Sooda Sanjiva Shetty and Late Sarojini Shetty Memorial cash Award for **Economically backward meritorious student pursuing PUC, Degree or any other professional course (3 Awards)** | Sampreeth Kumar Shetty | Subramanya Shetty / Srimathi | 3rd year BCA - CGPA 8.17 in 2nd year. |
| 27B | | Prathvik | Jayaprakash Shetty / Revathi Shetty | 8.58 CGPA in 2nd year BE |
| 27C | | Thanish B Alva | Late Bhagavandas Alva | Pursuing 1st year MCA in Manipal College -CGPA 9.51 in BCA |
| 28A | Late Shakthish Shetty Memorial Excellence Award for **Highest scoring girl student in PUC** (4 Awards) | Shriya Shetty | Sudeep Shetty / Shami Shetty | 98.83%, 593/600 |
| 28B | | Sannidhi M | Manjunatha Shetty / Vinoda | 98.67% , 592/600, 8th State Rank in PUC |
| 28C | | Pranavi Shetty | Sy. Lokesh Shetty / Thaniya Shetty | 98.5% , 591/600, 9th State Rank in PUC |
| 28D | | Ashwini | Ashok Kumar Shetty / baby | 98.33%, 590/600, 10th State Rank in PUC |
| 29A | Late K.S. Harshavardhan Shetty Memorial Endowment Award for **meritorious student pursuing PUC, Degree or any other professional course who has lost their father (2 Awards)** | Shrinidhi Shetty | Late Sudhakar Shetty / Late Surekha Shetty | B.Com 3rd year- CGPA -8.6/10, She lost her both mother and father. |
| 29B | | Sushant Shetty | Late Sudhakar Shetty / Shalini Shetty | 2nd year BE - 8.9 CGPA |
| 30 | Brahmavara Thenkumane late Dr.B Raghava Shetty memorial Award -- **Medical student** | Vriddhi C Hegde | Chandrasheela Hegde | Pursuing 3rd year MBBS - 384/500 - 76.8% |

# Prathibha Puraskara - Highest Scoring Student in SSLC

| S.N. | Name | Parent Name | Marks | Percentage |
|---|---|---|---|---|
| 1 | Likith D Shetty | Dinesh Shetty / Savitha Shetty | 623 | 99.68 |
| 2 | Naman C Shetty | Chandradhar Shetty / Nalina C Shetty | 619 | 99.04 |
| 3 | Manvith Shetty | Karunakara Shetty / Shakunthala | 619 | 99.04 |
| 4 | Nayana Shetty | Narayana Shetty / Seetha Shetty | 618 | 98.88 |
| 5 | Sanvi S Shetty | Sathish Shetty / Vijayalakshmi S Shetty | 618 | 98.88 |
| 6 | Atheeth Rai Kanwatheertha | Narendra Kanwatheertha / Savitha B | 617 | 98.72 |
| 7 | Hardik P Shetty | Pradeep Kumar / Saritha H | 617 | 98.72 |
| 8 | Sahana | Chandrashekar Shetty / Kavitha Shetty | 616 | 98.56 |
| 9 | Gagan C Shetty | Chandrashekar Shetty / Poornima C Shetty | 612 | 97.92 |
| 10 | Pavan H Shetty | Harish S Shetty / Mamatha H Shetty | 612 | 97.92 |
| 11 | Sannidhi Shetty | Surendra Shetty / K Mallika Shetty | 610 | 97.6 |
